ಜನಮನದ ದನಿ


# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

ಹಾರ್ದಿಕ್ ಪಾಂಡ್ಯ ಅವರು ಮುಂಬೈ ಇಂಡಿಯನ್ಸ್ ತಂಡವನ್ನು ತೊರೆಯುವುದು ಖಚಿತವಾಗಿದ್ದು, ಕೋಲ್ಕತ್ತಾ ನೈಟ್ ರೈಡರ್ಸ್ ಹಾಗೂ ರಾಜಸ್ಥಾನ ತಂಡಗಳು ಅವರನ್ನು ಟ್ರೇಡಿಂಗ್ ಮಾಡಿಕೊಳ್ಳಲು ಆಸಕ್ತಿ ತೋರಿವೆ ಎನ್ನಲಾಗಿದೆ.



25 ಜೂನ್, 2026 ಗುರುವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 106 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629


ಅಳಿವಿನ ಅಂಚಿನಲ್ಲಿ ಜಾನಪದಗಳು » 2


ವ್ಯಸನಗಳು ಬದುಕನ್ನೇ ನಾಶ ಮಾಡುತ್ತವೆ » 3


ಎಸ್ಐಆರ್ ಯಶಸ್ಸಿಗೆ ಎಲ್ಲರ ಸಹಕಾರ ಅತ್ಯಗತ್ಯ » 4

# ಖರ್ಗೆ ಕುಟುಂಬದ ವಿರುದ್ಧ ಭೂ ಕಬಳಿಕೆ ಆರೋಪ

## ಹಗರಣಗಳ ವಿವರ ಬಿಡುಗಡೆ ಮಾಡಿದ ಬಿಜೆಪಿ

• ಪ್ರಜೋದಯ ವರದಿ

**ನವದೆಹಲಿ:** ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಅವರ ಕುಟುಂಬದ ಒಡೆತನದ ಸಿದ್ಧಾರ್ಥ ವಿಹಾರ್ ಟ್ರಸ್ಟ್‌ಗೆ ಕರ್ನಾಟಕದಲ್ಲಿ 100 ಕೋ. ರೂ. ಮೌಲ್ಯದ ಸರ್ಕಾರಿ ಜಮೀನನ್ನು ನಿಯಮ ಉಲ್ಲಂಘಿಸಿ ಹಂಚಿಕೆ ಮಾಡಲಾಗಿದೆ ಎಂದು ಬಿಜೆಪಿ ಆರೋಪಿಸಿದೆ.

ಬಿಜೆಪಿ ಪ್ರಧಾನ ಕಚೇರಿಯಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಬಿಜೆಪಿಯ ರಾಷ್ಟ್ರೀಯ ವಕ್ತಾರ ಪ್ರದೀಪ್ ಭಂಡಾರಿ ಅವರು ಮಾತನಾಡಿ, ಖರ್ಗೆ ಕುಟುಂಬದ ವಿರುದ್ಧದ ಮೂರು ಪ್ರಮುಖ ಭೂ ಹಗರಣಗಳ ವಿವರಗಳನ್ನು ಬಿಡುಗಡೆ ಮಾಡಿ, ಅಧಿಕಾರ ದುರುಪಯೋಗ ಮತ್ತು ಭೂ ಅಕ್ರಮದ ಆರೋಪಗಳನ್ನು ಹೊರಿಸಿದ್ದಾರೆ.

ಸಿದ್ಧಾರ್ಥ ವಿಹಾರ್ ಟ್ರಸ್ಟ್‌ನಲ್ಲಿ ಮಲ್ಲಿಕಾರ್ಜುನ ಖರ್ಗೆ, ಅವರ ಪುತ್ರ ಪ್ರಿಯಾಂಕ್ ಖರ್ಗೆ, ಖರ್ಗೆ ಅವರ ಅಳಿಯ ಮತ್ತು ಅವರ ಧರ್ಮಪತ್ನಿ ಮಾತ್ರ ಸದಸ್ಯರಾಗಿದ್ದಾರೆ. ಇಡೀ ಕುಟುಂಬವೇ ಸೇರಿಕೊಂಡು ತಮ್ಮ ರಾಜಕೀಯ ಪ್ರಭಾವ ಹಾಗು ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡು ಕರ್ನಾಟಕದ ವಿವಿಧೆಡೆ ಬಡವರ ಭೂಮಿಯನ್ನು ಲೂಟಿ ಮಾಡಿದೆ ಎಂದು ಪ್ರದೀಪ್ ಭಂಡಾರಿ ಆರೋಪಿಸಿದ್ದಾರೆ.

> ಮಲ್ಲಿಕಾರ್ಜುನ ಖರ್ಗೆ ಅವರು ಟ್ರಸ್ಟ್ ಮೂಲಕ ಬೇರೆ ಬೇರೆ ಕಡೆಗಳಲ್ಲಿ ಹೇಗೆ ಭೂಮಿ ಯನ್ನು ಅಕ್ರಮವಾಗಿ ವಶಪಡಿಸಿ ಕೊಂಡಿದ್ದಾರೆಂಬ ಸರಣಿ ಭ್ರಷ್ಟಾಚಾರ ದ ಪ್ರಕರಣಗಳನ್ನು ಶೀಘ್ರದಲ್ಲೇ ಸಾರ್ವಜನಿಕವಾಗಿ ಪ್ರಸ್ತುತಪಡಿಸ ಲಿದ್ದೇನೆ.
> -ಪ್ರದೀಪ್ ಭಂಡಾರಿ, ಬಿಜೆಪಿ ರಾಷ್ಟ್ರೀಯ ವಕ್ತಾರ



### ಏರೋಸ್ಪೇಸ್ ಪಾರ್ಕ್‌ನಲ್ಲಿ 5 ಎಕರೆ ಜಮೀನು ಹಂಚಿಕೆ

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಏರೋಸ್ಪೇಸ್ ಮತ್ತು ಡಿಫೆನ್ಸ್ ಸಂಶೋಧನೆ ಮತ್ತು ಅಭಿವೃದ್ಧಿ ಹೆಸರಿನಲ್ಲಿ ಸಿದ್ಧಾರ್ಥ ವಿಹಾರ್ ಟ್ರಸ್ಟ್‌ಗೆ 2024 ರಲ್ಲಿ ಭಾರೀ ಮೌಲ್ಯದ 5 ಎಕರೆ ಜಮೀನನ್ನು ಹಂಚಿಕೆ ಮಾಡಲಾಗಿದೆ. ಕೈಗಾರಿಕಾ ಉದ್ದೇಶಗಳಿಗಾಗಿ ಬಳಸಬೇಕಿದ್ದ ಈ ಜಮೀನನ್ನು ಖರ್ಗೆ ಅವರ ಖಾಸಗಿ ಟ್ರಸ್ಟ್ ಗೆ ನೀಡಲಾಗಿದ್ದು, ಇದರ ಪ್ರಸ್ತುತ ಮಾರುಕಟ್ಟೆ ಮೌಲ್ಯ ಸುಮಾರು 100 ಕೋ.ರೂ. ಎಂದು ದೂರಿದ್ದಾರೆ.

### 19 ಎಕರೆ ಸರ್ಕಾರಿ ಭೂಮಿ ಸ್ವಾಧೀನ

ಕರ್ನಾಟಕ ಸರ್ಕಾರವು ಕಲಬುರಗಿಯಲ್ಲಿ ಬರೋಬ್ಬರಿ 19 ಎಕರೆ ಸರ್ಕಾರಿ ಜಮೀನನ್ನು ಖರ್ಗೆ ಅವರ ಖಾಸಗಿ ಟ್ರಸ್ಟ್‌ಗೆ ಪರಭಾರೆ ಮಾಡಿದೆ. ಸರ್ಕಾರದ ಆಸ್ತಿ ರಾತ್ರೋರಾತ್ರಿ ಖರ್ಗೆ ಕುಟುಂಬದ ಖಾಸಗಿ ಸ್ವತ್ತಾಗಿ ಬದಲಾಗಿದೆ. ಮಲ್ಲಿಕಾರ್ಜುನ ಖರ್ಗೆ ತಮ್ಮ ಅಧಿಕಾರ ಬಳಸಿ ಈ ಭೂಮಿಯನ್ನು ಹೇಗೆ ಕಬಳಿಸಿದರೆಂಬುದಕ್ಕೆ ಕಾಂಗ್ರೆಸ್ ಉತ್ತರ ನೀಡಬೇಕೆಂದು ಆಗ್ರಹಿಸಿದ್ದಾರೆ.

ಕಲಬುರಗಿಯಲ್ಲಿ ಜಮೀನೊಂದನ್ನು ಖರ್ಗೆ ಅವರ ಟ್ರಸ್ಟ್‌ಗೆ ಖಾಯಂ ಆಗಿ ವರ್ಗಾಯಿಸಿ ಕೊಳ್ಳಲು ನಕಲಿ ಮಾರಾಟಗಾರ ನನ್ನು ಸೃಷ್ಟಿಸಲಾಗಿತ್ತು. ಆ ಜಮೀನನ್ನು ಮಾರಾಟ ಮಾಡಿದ ಅಸಲಿ ವ್ಯಕ್ತಿ ಯಾರೆಂಬುದು ತಿಳಿದಿಲ್ಲ. ಇದೇ ವೇಳೆ, ಗಾಂಧಿ ಕುಟುಂಬದ ವಿರುದ್ಧ ಇರುವ ಭೂ ಹಗರಣಗಳನ್ನು ಪ್ರಸ್ತಾಪಿಸಿದ ಪ್ರದೀಪ್ ಭಂಡಾರಿ, ರಾಹುಲ್ ಗಾಂಧಿ ಮತ್ತು ರಾಬರ್ಟ್ ವಾದ್ರಾ ಅವರು ದೇಶದಲ್ಲಿ ಯಾವ ರೀತಿ ಯಾಗಿ ಭೂ ಲೂಟಿ ಮಾಡಿ ದ್ದಾರೋ, ಅದೇ ಮಾದರಿಯನ್ನು ಈಗ ಮಲ್ಲಿಕಾರ್ಜುನ ಖರ್ಗೆ ಅವರು ಕರ್ನಾಟಕದಲ್ಲಿ ಸಿದ್ಧಾರ್ಥ ವಿಹಾರ್ ಟ್ರಸ್ಟ್ ಮೂಲಕ ಮುಂದು ವರೆಸಿಕೊಂಡು ಹೋಗುತ್ತಿದ್ದಾರೆ. ರಾಬರ್ಟ್ ವಾದ್ರಾ ಅವರಿಗೆ ಎಲ್ಲಿ ಜಮೀನು ಕಂಡರೂ ಬಿಟ್ಟಿಲ್ಲ. ಅದೇ ರೀತಿ ಕರ್ನಾಟಕದಲ್ಲಿ ಎಲ್ಲಿ ಪ್ರಮುಖ ಜಾಗಗಳಲ್ಲಿ ಜಮೀನುಗಳಿದ್ದರೂ ಖರ್ಗೆ ತಮ್ಮ ಪ್ರಭಾವ ಬಳಸಿ ಅದನ್ನು ಕಬಳಿಸುತ್ತಿದ್ದಾರೆ. ಇದಕ್ಕೆ ಅವರು ಉತ್ತರ ನೀಡಲೇಬೇಕೆಂದು ವಾಗ್ದಾಳಿ ನಡೆಸಿದ್ದಾರೆ.



# ಕಮೀಷನ್ ಆರೋಪ ಸತ್ಯಕ್ಕೆ ದೂರವಾದುದು

• ಪ್ರಜೋದಯ ವರದಿ

**ಹಾಸನ:** ವಿಧಾನಸಭೆಯಿಂದ ವಿಧಾನ ಪರಿಷತ್‌ಗೆ ನಡೆದ ಚುನಾವಣೆಯಲ್ಲಿ ಅಡ್ಡ ಮತದಾನ ಮಾಡಿದ್ದೇನೆ, ಕಾಮಗಾರಿಗೆ ಕಮೀಷನ್ ಪಡೆಯುತ್ತಿದ್ದೇನೆಂಬ ಆರೋಪಗಳೆಲ್ಲಾ ಸುಳ್ಳಾಗಿದ್ದು ಕ್ಷೇತ್ರದ ಜನರಿಗೆ ಸತ್ಯದ ಅರಿವಿದೆ ಎಂದು ಶಾಸಕ ಸಿಮೆಂಟ್ ಮಂಜು ಅವರು ಮಾಜಿ ಶಾಸಕ ಹೆಚ್.ಎಂ.ವಿಶ್ವನಾಥ್ ಅವರಿಗೆ ತಿರುಗೇಟು ನೀಡಿದರು.

ಸಕಲೇಶಪುರದ ಲೋಕೋಪಯೋಗಿ ಇಲಾಖೆ ಕಚೇರಿಯಲ್ಲಿ ಮಾಜಿ ಶಾಸಕ ಹೆಚ್.ಎಂ.ವಿಶ್ವನಾಥ್ ಅವರು ನೀಡಿದ್ದ ಹೇಳಿಕೆಗಳಿಗೆ ಬುಧವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ದಲಿತ ಗುತ್ತಿಗೆದಾರನಿಗೆ ಅನ್ಯಾಯ ಮಾಡಿದ್ದೇನೆಂದು ನನ್ನ ವಿರುದ್ಧ ಆರೋಪಿಸುತ್ತಿದ್ದಾರೆ. ಅದೇ ಗುತ್ತಿಗೆದಾರ ಕಳೆದ ಮೂರು ವರ್ಷದಲ್ಲಿ 2.5 ಕೋ.ರೂ. ಮೊತ್ತದ ಕೆಲಸ ಮಾಡಿದ್ದಾರೆ. ಕಾಮಗಾರಿಯೊಂದಕ್ಕೆ ಭೂಮಿಪೂಜೆ ನೆರವೇರಿಸಲು ಸಮಯ ನೀಡಲಿಲ್ಲವೆಂದು ಸುಳ್ಳು ಸುದ್ದಿ ಹಬ್ಬಿಸುವುದು ಎಷ್ಟರ ಮಟ್ಟಿಗೆ ಸರಿ. ನಾನು ಕಮೀಷನ್ ಪಡೆಯುತ್ತಿದ್ದೇನೆಂಬುದಕ್ಕೆ ಸಾಕ್ಷಿ ಇದ್ದರೆ ಬಹಿರಂಗಪಡಿಸಲಿ ಎಂದು ಸವಾಲೆಸೆದರು.

ವಿಶ್ವನಾಥ್ ಅವರು ವಯಸ್ಸಲ್ಲಿ ನನಗಿಂತ ಹಿರಿಯರು, ಮಾಜಿ ಶಾಸಕರಿದ್ದಾರೆ. 2023ರ ಚುನಾವಣೆ ವೇಳೆ ನನ್ನ ವಿರುದ್ಧ ಯಾರ್ಯಾರು ಏನೇನು ಮಾಡಿದ್ದಾರೆಂಬುದು ಕ್ಷೇತ್ರದ ಜನರಿಗೆ ಗೊತ್ತಿದೆ. ಎಲ್ಲವೂ ದೇವರು ಮತ್ತು ಮತದಾರರಿಗೆ ಗೊತ್ತಿದೆ. ಕಳೆದ ಮೂರು ವರ್ಷಗಳಿಂದ ಕಷ್ಟಪಟ್ಟು ಜನರ ಕೆಲಸ ಮಾಡುತ್ತಿದ್ದೇನೆ. ನನ್ನ ಏಳಿಗೆ ಸಹಿಸಲಾಗದೆ ಸುಳ್ಳು ಸುದ್ದಿ ಹಬ್ಬಿಸುತ್ತಿದ್ದಾರೆಂದರು.

ನಾನು ದಲಿತ ಸಮಾಜದಲ್ಲಿ ಹುಟ್ಟಿದವನು. ಅಂಬೇಡ್ಕರ್ ಅವರು ಕಲ್ಪಿಸಿರುವ ಸಂವಿಧಾನದಡಿ ನಾನು ಶಾಸಕನಾಗಿ ಆಯ್ಕೆಯಾಗಿದ್ದೇನೆ. 45 ವರ್ಷಗಳ ಜೀವನದಲ್ಲಿ ಒಂದೇ ಒಂದು ಕಪ್ಪು ಚುಕ್ಕಿ ಅಂಟಿಸಿಕೊಂಡಿಲ್ಲ. ನನ್ನ ಸಹೋ ದರರು ಲೂಟಿ ಹೊಡೆಯುತ್ತಿದ್ದಾ ರೆಂದು ಗಾಳಿಯಲ್ಲಿ ಗುಂಡು ಹೊಡೆ ಯಬಾರದೆಂದು ವಾಗ್ದಾಳಿ ನಡೆಸಿದರು.



> ಮೂರು ಸಲ ಟಿಕೆಟ್ ತಪ್ಪಿದರೂ ನಿಷ್ಠಾವಂತ ಕಾರ್ಯಕರ್ತನಾಗಿ ಕೆಲಸ ಮಾಡಿದ್ದೇನೆ. ಹೆಚ್.ಎಂ.ವಿಶ್ವನಾಥ್ ಯಾವ ಪಕ್ಷದಲ್ಲಿದ್ದಾರೆಂಬುದನ್ನು ಅವರೇ ಹೇಳಬೇಕು. ಬಿಜೆಪಿ ಕಾರ್ಯಕರ್ತನಾಗಿ ಹಾಗು ಶಾಸಕನಾಗಿ ಜನರ ಋಣ ತೀರಿಸುತ್ತೇನೆ.
> -ಸಿಮೆಂಟ್ ಮಂಜು, ಶಾಸಕ

### ಪಕ್ಷ ಹೇಳಿದವರಿಗೆ ಮತ ನೀಡಿದ್ದೇನೆ

ವಿಧಾನ ಪರಿಷತ್ ಚುನಾವಣೆಯಲ್ಲಿ ನಮ್ಮ ಪಕ್ಷದ ಅಭ್ಯರ್ಥಿಗಳಾದ ರಘು ಕೌಟಿಲ್ಯ ಅವರಿಗೆ 30 ಹಾಗು ಲಿಂಗರಾಜ್ ಪಾಟೀಲ್‌ಗೆ 30 ವೋಟು ಹಾಕಬೇಕೆಂದು ಪಕ್ಷ ಸೂಚಿಸಿತ್ತು. ಅದರಂತೆ ನಾನು ರಘು ಕೌಟಿಲ್ಯ ಅವರಿಗೆ ಮತ ಹಾಕಿದ್ದೇನೆ. ಇವರಿಗೇ ವೋಟ್ ಮಾಡಬೇಕು ಅಂತ ನನಗೆ ಆದೇಶವಿತ್ತು. ಅದರಂತೆ ಮತ ಚಲಾಯಿಸಿದ್ದೇನೆ ಎಂದರು.

ರಘು ಕೌಟಿಲ್ಯ ಅವರಿಗೆ 30 ಮತ ಬಿದ್ದಿದೆ. ಅದರಲ್ಲಿ ಒಂದು ಮತ ಅಮಾನ್ಯಗೊಂಡಿದೆ. ಪಕ್ಷಕ್ಕೆ ದ್ರೋಹ ಬಗೆದವರ ವಿರುದ್ಧ ಹೈಕಮಾಂಡ್ ಕ್ರಮ ಕೈಗೊಳ್ಳುತ್ತದೆ. ರಾಷ್ಟ್ರೀಯ ಹಾಗು ರಾಜ್ಯ ನಾಯಕರು ಕೈಗೊಳ್ಳುವ ನಿರ್ಧಾರಕ್ಕೆ ನಾನು ಬದ್ಧ ಎಂದರು.

# ಆಸ್ಪತ್ರೆಗೆ ರೇವಣ್ಣ ಭೇಟಿ: ವೈದ್ಯಾಧಿಕಾರಿ ಜೊತೆ ಸಮಾಲೋಚನೆ

## ನೌಕರರನ್ನು ಏಕಾಏಕಿ ಕೆಲಸದಿಂದ ತೆಗೆಯದಂತೆ, ನಿಯಮ ಪ್ರಕಾರ ನೇಮಕಾತಿಗೆ ಸೂಚನೆ

• ಪ್ರಜೋದಯ ವರದಿ

**ಹೊಳೆನರಸೀಪುರ:** ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಹೊರ ಗುತ್ತಿಗೆ ನೌಕರರನ್ನು ಕೆಲಸದಿಂದ ತೆಗೆದುಹಾಕಿ ಸಂಬಂಧ ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ಬುಧವಾರ ಆಸ್ಪತ್ರೆಗೆ ಭೇಟಿ ನೀಡಿ, ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ|| ಕೆ.ಎಲ್.ಮಂಜುಳಾ ಮತ್ತು ಸುರಕ್ಷಾ ಏಜೆನ್ಸಿಯ ಸುರೇಶ್ ಅವರೊಂದಿಗೆ ಸಮಾಲೋಚನೆ ನಡೆಸಿದರು.

ಕೆಲಸದಿಂದ ತೆಗೆದು ಹಾಕಿರುವುದನ್ನು ಖಂಡಿಸಿ ಹೊರಗುತ್ತಿಗೆ ನೌಕರರು ಮಂಗಳವಾರ ಆಸ್ಪತ್ರೆಯ ಮುಂಭಾಗ ಧರಣಿ ನಡೆಸಿ, ಆಕ್ರೋಶ ವ್ಯಕ್ತಪಡಿಸಿದ್ದರು. ಈ ಹಿನ್ನಲೆ ಆಸ್ಪತ್ರೆಗೆ ಭೇಟಿ ನೀಡಿದ ಹೆಚ್.ಡಿ.ರೇವಣ್ಣ ಅವರು ಸಂಬಂಧಪಟ್ಟವರೊಂದಿಗೆ ಸಭೆ ನಡೆಸಿ ಯಾವುದೇ ನೌಕರರನ್ನು ಏಕಾಏಕಿ ಕೆಲಸದಿಂದ ತೆಗೆಯದಂತೆ ಮತ್ತು ನಿಯಮಗಳ ಪ್ರಕಾರ ನೇಮಕಾತಿ ಪ್ರಕ್ರಿಯೆಯನ್ನು ನಡೆಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.



ಆಸ್ಪತ್ರೆಯ ಸಿಬ್ಬಂದಿ ವರ್ಗಾವಣೆಯಲ್ಲಿ ಮತ್ತು ಹೊಸ ನೇಮಕಾತಿಯಲ್ಲಿ ಪಾರದರ್ಶಕತೆ ಕಾಪಾಡಿಕೊಳ್ಳಬೇಕು. ನೌಕರರ ನೇಮಕಾತಿ ಮತ್ತು ವೇತನಕ್ಕೆ ಸಂಬಂಧಿಸಿದ ಗೊಂದಲ ನಿವಾರಿಸಲು ಅಧಿಕಾರಿಗಳಿಗೆ ಸೂಚನೆ ನೀಡಿ, ಆಸ್ಪತ್ರೆಯಲ್ಲಿ ರೋಗಿಗಳಿಗೆ ಲಭ್ಯವಿರುವ ಸೌಲಭ್ಯಗಳು, ಸ್ವಚ್ಛತೆ ಮತ್ತು ಮೂಲಭೂತ ಅವಶ್ಯಕತೆಗಳ ಬಗ್ಗೆಯೂ ಚರ್ಚಿಸಿ, ನೌಕರರ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಆಸ್ಪತ್ರೆಯ ಆಡಳಿತವನ್ನು ಸುಗಮಗೊಳಿಸಲು ಕ್ರಮ ಕೈಗೊಳ್ಳಲು ಸಲಹೆಗಳನ್ನು ನೀಡಿದರು.

ಇದಕ್ಕೂ ಮೊದಲು ಪ್ರತಿಭಟನಾಕಾರರು ಮಾತನಾಡಿ, ಆಸ್ಪತ್ರೆಯಲ್ಲಿ ಒಟ್ಟು 70 ಮಂದಿ ಡಿ-ಗ್ರೂಪ್ ಹೊರಗುತ್ತಿಗೆ ನೌಕರರು ಕಾರ್ಯನಿರ್ವಹಿಸುತ್ತಿದ್ದು, 21 ಜನರನ್ನು ಮುನ್ಸೂಚನೆ ನೀಡದೆ ಏಕಾಏಕಿ ಕೆಲಸದಿಂದ ತೆಗೆದು ಹಾಕಲಾಗಿದೆ. ಆಸ್ಪತ್ರೆಯ ಇತಿಹಾಸದಲ್ಲೇ ಮೊದಲ ಬಾರಿಗೆ ಇಷ್ಟೊಂದು ಜನರನ್ನು ಕೆಲಸದಿಂದ ತೆಗೆದು ಹಾಕಲಾಗಿದೆ ಎಂದು ಅಳಲುತೋಡಿಕೊಂಡರು. ಡಾ.ನಾಗೇಂದ್ರ, ಡಾ. ಸೆಲ್ವ ಕುಮಾರ್, ಡಾ.ನಟರಾಜ್, ಮತ್ತು ಧರಣಿ ನಿರತರು ಮತ್ತು ಆಸ್ಪತ್ರೆಯ ಆಡಳಿತ ವಿಭಾಗದ ಸಿಬ್ಬಂದಿ, ವೈದ್ಯರು ಇದ್ದರು.

# ಸಿಂಗಪಟ್ಟಣ ಡೇರಿ ವಿವಾದ: ಮಾಹಿತಿ ಪಡೆದ ಸ್ವರೂಪ್

## ಇಂದು ಹಾಮೂಲ್ ಅಧಿಕಾರಿಗಳ ಭೇಟಿ | ಕಾರ್ಯದರ್ಶಿ ವಜಾ ಸಾಧ್ಯತೆ

• ಪ್ರಜೋದಯ ವರದಿ

**ಹಾಸನ:** ಸಮೀಪದ ಸಿಂಗಪಟ್ಟಣ ಗ್ರಾಮದ ಹಾಲು ಉತ್ಪಾದಕರ ಸಂಘದ ಕಾರ್ಯದರ್ಶಿ ಹಾಗು ಗ್ರಾಮಸ್ಥರ ನಡುವಿನ ಮುಸುಕಿನ ಗುದ್ದಾಟ ದಿನದಿಂದ ದಿನಕ್ಕೆ ತಾರಕಕ್ಕೇರುತ್ತಿರುವ ಹಿನ್ನಲೆಯಲ್ಲಿ ಬುಧವಾರ ಶಾಸಕ ಹೆಚ್.ಪಿ.ಸ್ವರೂಪ್ ಅವರು ಸ್ಥಳಕ್ಕೆ ಭೇಟಿ ನೀಡಿ ಮಾಹಿತಿ ಪಡೆದರು.

ಡೇರಿ ಕಾರ್ಯದರ್ಶಿಯಾಗಿ ಮಧು ಕಳೆದ 21 ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ಕೇಂದ್ರ ಡೇರಿಯಿಂದ ಬರುವ ಯಾವ ಸವಲತ್ತುಗಳನ್ನು ಹೈನುಗಾರರಿಗೆ ಕಲ್ಪಿಸುತ್ತಿಲ್ಲ. ಡೇರಿಯಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆಯುತ್ತಿದ್ದು, ರೈತರೊಂದಿಗೆ ಸೌಜನ್ಯದಿಂದ ವರ್ತಿಸುತ್ತಿಲ್ಲ. ಕಾರ್ಯದರ್ಶಿ ಸ್ಥಾನದಿಂದ ಅವರನ್ನು ವಜಾಗೊಳಿಸಬೇಕೆಂದು ಗ್ರಾಮಸ್ಥರು ವಾರದಿಂದ ಪ್ರತಿಭಟನೆ ನಡೆಸುತ್ತಿದ್ದರು.

ಈ ಬಗ್ಗೆ ವಿಚಾರ ತಿಳಿದ ಶಾಸಕ ಹೆಚ್.ಪಿ.ಸ್ವರೂಪ್ ಅವರು ಭೇಟಿ ನೀಡಿದಾಗ ಗ್ರಾಮಸ್ಥರು ಕಾರ್ಯದರ್ಶಿ ವಿರುದ್ಧ ದೂರಿನ ಸುರಿಮಳೆಗೈದರು. ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಹೆಚ್.ಪಿ.ಸ್ವರೂಪ್ ಅವರು, ರೈತರಿಗೆ ಅನುಕೂಲವಾಗಬೇಕಿರುವ ಸಂಘದಲ್ಲಿ ಅವ್ಯವಹಾರ ನಡೆದರೆ ಸಹಿಸಲು ಸಾಧ್ಯವಿಲ್ಲ. ರೈತರು ಕಷ್ಟಪಟ್ಟು ಹೈನುಗಾರಿಕೆ ಮಾಡಿ ಆರ್ಥಿಕ ಸ್ವಾವಲಂಬಿಯಾಗಲು ಬಯಸುತ್ತಾರೆ. ಅವರಿಗೆ ತೊಂದರೆ ಆಗಬಾರದು. ಕಾರ್ಯದರ್ಶಿ ವಿರುದ್ಧ ಗಂಭೀರ ಆರೋಪ ಕೇಳಿ ಬಂದಿದ್ದು, ಗುರುವಾರ ಕೇಂದ್ರ ಡೇರಿ ಅಧಿಕಾರಿಗಳ ತಂಡ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಿದೆ ಎಂದರು.

ಹಾಲು ಉತ್ಪಾದಕರಿಗೆ ತೊಂದರೆ ಆಗಬಾರದು, ರೈತರು ಉಳಿಯಬೇಕು. ಈ ವಿಚಾರದಲ್ಲಿ ಗ್ರಾಮಸ್ಥರಿಗೆ ಅಧಿಕಾರ ನೀಡಲಾಗಿದೆ. ಹಾಲು ಉತ್ಪಾದಕ ಸಂಘದಲ್ಲಿ 12 ಸದಸ್ಯರಿದ್ದು, ಅವರೇ ಅಧ್ಯಕ್ಷರನ್ನು ಆಯ್ಕೆ ಮಾಡಿಕೊಂಡಿದ್ದಾರೆಂದರು.

ಹಾಮೂಲ್ ಅಧ್ಯಕ್ಷ ಹೆಚ್.ಡಿ. ರೇವಣ್ಣ ಅವರು ಹಾಲು ಉತ್ಪಾದಕರ ವಿಚಾರದಲ್ಲಿ ಯಾವುದೇ ರಾಜಿ ಆಗುವವರಲ್ಲ, ರೈತರಿಗೆ ಅನುಕೂಲ ಆಗಲಿ ಎಂದು ಕಡಿಮೆ ಬಡ್ಡಿ ದರದಲ್ಲಿ ಸಾಲ ಕೊಡುತ್ತಿದ್ದಾರೆ. ನಾನೂ ಕೂಡ ಅಧ್ಯಕ್ಷರ ಗಮನಕ್ಕೆ ತಂದು ಮುಂದಿನ ದಿನಗಳಲ್ಲಿ ಹೆಚ್ಚಿನ ಸೌಲಭ್ಯ ಕೊಡಿಸಲು ಪ್ರಯತ್ನ ಮಾಡುವೆ ಎಂದು ಸ್ವರೂಪ್ ತಿಳಿಸಿದರು.



ಈ ಕುರಿತು ಪತ್ರಿಕೆಯೊಂದಿಗೆ ಮಾತನಾಡಿದ ಹಾಮೂಲ್ ವ್ಯವಸ್ಥಾಪಕ ನಿರ್ದೇಶಕ ಮಹೇಶ್ ಅವರು ಮಾತನಾಡಿ, ಸಿಂಗಪಟ್ಟಣ ಡೇರಿಯಲ್ಲಿ ಬೆಳಿಗ್ಗೆ ಮತ್ತು ಸಂಜೆ ಸೇರಿ 1,200 ಲೀಟರ್ ಹಾಲು ಸಂಗ್ರಹವಾಗುತ್ತದೆ. ಹಲವು ದಿನಗಳಿಂದ ಗ್ರಾಮಸ್ಥರು ಹಾಗು ಕಾರ್ಯದರ್ಶಿ ನಡುವೆ ಗಲಾಟೆ ನಡೆಯುತ್ತಿದೆ. ಗುರುವಾರ ಬೆಳಿಗ್ಗೆ ಅಧಿಕಾರಿಗಳು ಭೇಟಿ ನೀಡಿ ಸಮಸ್ಯೆ ಬಗೆಹರಿಸಲಿದ್ದಾರೆಂದರು.

# ಅಜ್ಞಾನ-ಬಡತನ ನಿರ್ಮೂಲನೆಗೆ ಶಿಕ್ಷಣವೊಂದೇ ಅಸ್ತ್ರ

## ಕಬ್ಬಳಿಯಲ್ಲಿ ಗುರು ದರ್ಶನ ಕಾರ್ಯಕ್ರಮದಲ್ಲಿ ಚುಂಚಶ್ರೀ ಆಶೀರ್ವಚನ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಅಜ್ಞಾನ ಹಾಗು ಬಡತನವನ್ನು ನಿರ್ಮೂಲನೆ ಮಾಡುವ ಶಕ್ತಿ ಶಿಕ್ಷಣಕ್ಕೆ ಮಾತ್ರ ಇದೆ ಎಂದು ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧಿಪತಿ ಡಾ. ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಶ್ರೀ ಕ್ಷೇತ್ರ ಕಬ್ಬಳಿ ಶ್ರೀ ಬಸವೇಶ್ವರಸ್ವಾಮಿ ಸನ್ನಿಧಿಯಲ್ಲಿ ಬುಧವಾರ ನಡೆದ ಗುರು ದರ್ಶನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಶಿಕ್ಷಣದಿಂದ ಮಾತ್ರ ಸಮಾಜದ ಬದಲಾವಣೆ ಮತ್ತು ಸುಧಾರಣೆ ಸಾಧ್ಯ. ವ್ಯಾಸಂಗದ ಬಳಿಕ ಉನ್ನತ ಹುದ್ದೆಗಳನ್ನು ಪಡೆಯುವುದೇ ಮುಖ್ಯ ಉದ್ದೇಶವಾಗಬಾರದು. ತಾನು ಯಾರ ಬಳಿಯೋ ಕೆಲಸ ಮಾಡುವ ಬದಲು ಹತ್ತಾರು ಮಂದಿಗೆ ಉದ್ಯೋಗ ಕೊಡುವ ಹಂತಕ್ಕೆ ಬೆಳೆಯಬೇಕು. ಅದರಿಂದ ಶಿಕ್ಷಣ ಪಡೆದಿದ್ದಕ್ಕೂ ಸಾರ್ಥಕವಾಗಲಿದೆ. ಹೆತ್ತವರು ಮತ್ತು ಹುಟ್ಟಿದ ಊರಿಗೆ ಕೀರ್ತಿ ಬರುತ್ತದೆಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.



» ನಾಲ್ಕನೇ ಪುಟದಲ್ಲಿ

### ಇರಾನ್ ಭರವಸೆ ಸುಳ್ಳಾದರೆ ಶಾಂತಿ ಒಪ್ಪಂದ ರದ್ದು


**ವಾಷಿಂಗ್ಟನ್:** ಹೊರ್ಮುಜ್ ಜಲಸಂಧಿಯ ಮೂಲಕ ಹಾದು ಹೋಗುವ ಹಡಗುಗಳಿಂದ ಸುಂಕ ವಸೂಲಿ ಮಾಡುತ್ತಿಲ್ಲವೆಂದು ಇರಾನ್ ಭರವಸೆ ನೀಡಿದೆ ಎಂದು ಅಮೇರಿಕಾ ಅಧ್ಯಕ್ಷ ಟ್ರಂಪ್ ಅವರು ತಿಳಿಸಿದ್ದಾರೆ.

ಹಡಗುಗಳಿಂದ ಸುಂಕ, ವಿಮಾ ವೆಚ್ಚ ಅಥವಾ ಇನ್ಯಾವುದೇ ಶುಲ್ಕವನ್ನು ಬಯಸುತ್ತಿಲ್ಲ ಮತ್ತು ಸ್ವೀಕರಿಸುತ್ತಿಲ್ಲವೆಂದು ಇರಾನ್ ನಮಗೆ ಮಾಹಿತಿ ನೀಡಿದೆ ಎಂದು ಟ್ರಂಪ್ ಅವರು ತಮ್ಮ ಒಡೆತನದ ಸಾಮಾಜಿಕ ಮಾಧ್ಯಮ ಟ್ರೂತ್ ಮಾಧ್ಯಮದಲ್ಲಿ ಬರೆದುಕೊಂಡಿದ್ದಾರೆ.

# ಫುಡ್ ಕೋರ್ಟ್ ಜಾಗ ಬದಲಿಸಲು ಆಗ್ರಹ

• ಪ್ರಜೋದಯ ವರದಿ

**ಸಕಲೇಶಪುರ:** ಪಟ್ಟಣದ ಎಸ್‌ಬಿಐ ಬ್ಯಾಂಕ್ ಸಮೀಪ ಫುಡ್ ಕೋರ್ಟ್ ನಿರ್ಮಿಸಿದರೆ ಸಾರ್ವಜನಿಕರಿಗೆ ತೊಂದರೆಯಾಗಲಿದ್ದು, ಕೂಡಲೇ ಕಾಮಗಾರಿ ಸ್ಥಗಿತಗೊಳಿಸಿ ಬೇರೆ ಕಡೆ ವ್ಯವಸ್ಥೆ ಮಾಡಿಕೊಳ್ಳಬೇಕೆಂದು ಮಾಜಿ ಶಾಸಕ ಹೆಚ್.ಎಂ.ವಿಶ್ವನಾಥ್ ಅವರು ಆಗ್ರಹಿಸಿದ್ದಾರೆ.



ಎಸ್‌ಬಿಐ, ಕೆನರಾ, ಹೆಚ್‌ಡಿಎಫ್‌ಸಿ, ಕರ್ನಾಟಕ ಬ್ಯಾಂಕ್ ಸೇರಿ ಹಲವು ವಾಣಿಜ್ಯ ಮಳಿಗೆಗಳಿರುವ ಪ್ರದೇಶದಲ್ಲಿಯೇ ಪಟ್ಟಣ ಪಂಚಾಯಿತಿ, ಸಹಾಯಕ ಆಯುಕ್ತರ ಕಚೇರಿ, ಪ್ರವಾಸಿ ಮಂದಿರ ಹಾಗು ತಾಲ್ಲೂಕು ಕಚೇರಿ ಗಳಿಗೆ ಸಂಪರ್ಕ ಕಲ್ಪಿಸುವ ಪ್ರಮುಖ ರಸ್ತೆ ಇದಾಗಿದೆ. ಈ ಪ್ರದೇಶವು ಸಕಲೇಶಪುರದಲ್ಲಿ ಅತ್ಯಂತ ಹೆಚ್ಚು ಜನಸಂದಣಿ ಮತ್ತು ವಾಹನ ಸಂಚಾರ ಇರುವ ಭಾಗವಾಗಿದ್ದು, ಈಗಾಗಲೇ ವಾಹನ ನಿಲುಗಡೆಗೆ ಸಮರ್ಪಕ ಸ್ಥಳದ ಕೊರತೆ ಎದುರಾಗಿದೆ ಎಂದು ತಿಳಿಸಿದ್ದಾರೆ.

ಇಂತಹ ಜನನಿಬಿಡ ಪ್ರದೇಶದಲ್ಲಿ ವೈಜ್ಞಾನಿಕ ಯೋಜನೆ ಇಲ್ಲದೆ ಫುಡ್ ಕೋರ್ಟ್ ನಿರ್ಮಿಸುತ್ತಿರುವುದು ಸರಿಯಲ್ಲ. ಈ ಯೋಜನೆಯನ್ನು ರೂಪಿಸಿದ ಅಧಿಕಾರಿಗಳು ಅಥವಾ ಜನಪ್ರತಿನಿಧಿಗಳು ಸಾರ್ವಜನಿಕ ಸುರಕ್ಷತೆ ಮತ್ತು ಭವಿಷ್ಯದ ಸಂಚಾರ ಸಮಸ್ಯೆಗಳ ಬಗ್ಗೆ ಯೋಚಿಸಬೇಕಿತ್ತು ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಇಲ್ಲಿಯೇ ಫುಡ್ ಕೋರ್ಟ್ ನಿರ್ಮಿಸಬೇಕೆಂದು ಪ್ರತಿಷ್ಠೆಯಾಗಿ ಪರಿಗಣಿಸಲಾಗಿದೆ. ಇದರಿಂದ ಮುಂದಿನ ದಿನಗಳಲ್ಲಿ ವಾಹನ ದಟ್ಟಣೆ ಹೆಚ್ಚಾಗಿ ಅಪಘಾತಗಳು ಸಂಭವಿಸುವ ಸಾಧ್ಯತೆ ಇದೆ.

ಜಿಲ್ಲಾಧಿಕಾರಿ, ಸ್ಥಳೀಯ ಅಧಿಕಾರಿಗಳು ತಕ್ಷಣವೇ ಕಾಮಗಾರಿ ತಡೆ ಹಿಡಿಯಬೇಕು. ಇತ್ತೀಚೆಗೆ ಜಿಲ್ಲಾಡ

» ನಾಲ್ಕನೇ ಪುಟದಲ್ಲಿ

### ಟ್ರ್ಯಾಕ್ಟರ್ ಮಗುಚಿ ಕಾರ್ಮಿಕ ದಾರುಣ ಸಾವು

• ಪ್ರಜೋದಯ ವರದಿ

**ಅರಸೀಕೆರೆ :** ಟ್ರ್ಯಾಕ್ಟರ್ ಮಗುಚಿ ಬಿದ್ದ ಪರಿಣಾಮ ಇಂಜಿನ್ ಮೇಲೆ ಕುಳಿತಿದ್ದ ಕಾರ್ಮಿಕ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಮಾವಿನಕೆರೆ ಸಮೀಪದ ಇಳಿಜಾರಿನಲ್ಲಿ ನಡೆದಿದೆ.

ಬಿಹಾರದ ಬದರ್ವಾ ಗ್ರಾಮದ ಕಮಲೇಶ್ ರಾಮ್ (32) ಮೃತ ಪಟ್ಟು, ಮೂವರು ಗಂಭೀರವಾಗಿ ಗಾಯಗೊಂಡಿದ್ದಾರೆ. ಎಂಟು ವರ್ಷಗಳಿಂದ ತುಮಕೂರು ಜಿಲ್ಲೆಯ ದಸರಿಘಟ್ಟ ಗ್ರಾಮದ ಗೋವಿಂದೇಗೌಡ ರವರ ಹಾಲೋ ಬ್ರಿಕ್ಸ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡಿಕೊಂಡಿದ್ದ ಕಾರ್ಮಿಕರು ಜೂ.22ರಂದು ಟ್ರ್ಯಾಕ್ಟರ್‌ನಲ್ಲಿ ಸಿಮೆಂಟ್ ಇಟ್ಟಿಗೆಗಳನ್ನು ಲೋಡ್ ಮಾಡಿಕೊಂಡು ಕೆಂಕೆರೆ ಹತ್ತಿರದ ಮಾವಿನಕೆರೆ ಹುಚ್ಚಮ್ಮ ದೇವಿ ದೇವಾಲಯಕ್ಕೆ ಅನ್‌ಲೋಡ್ ಮಾಡಲು ಬರುತ್ತಿದ್ದರು. ಗ್ರಾಮದ ಇಳಿಜಾರಿನಲ್ಲಿ ಹೋಗುತ್ತಿದ್ದಾಗ ಎದುರುಗಡೆಯಿಂದ ವಾಹನ ಬಂದಿದ್ದಕ್ಕೆ ದಾರಿ ಮಾಡಿಕೊಡಲು ಚಾಲಕ ಟ್ರ್ಯಾಕ್ಟರ್ ಅನ್ನು ಎಡಕ್ಕೆ ತಿರುಗಿಸಿದ್ದರಿಂದ ನಿಯಂತ್ರಣ ತಪ್ಪಿ ಮಗುಚಿ ಬಿದ್ದಿದೆ. ಆಗ ಸುರೇಶ್ ಶರ್ಮಾ, ಕಮಲೇಶ್ ರಾಮ್, ಮೌನು ಕುಮಾರ್ ಹಾಗು ಮುಖಲೇಶ್ ಕುಮಾರ್ ಮೇಲೆ ಸಿಮೆಂಟ್ ಇಟ್ಟಿಗೆಗಳು ಬಿದ್ದಿವೆ. ಗಂಭೀರವಾಗಿ ಗಾಯಗೊಂಡಿದ್ದ ಕಮಲೇಶ್ ರಾಮ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಗಂಡಸಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಜಿಲ್ಲೆಯ 18 ಸಾವಿರ ಹೆಕ್ಟೇರ್ ಪರಿಭಾವಿತ ಅರಣ್ಯದಲ್ಲಿ 11 ಸಾವಿರ ಹೆಕ್ಟೇರ್‌ನಲ್ಲಿ ಸರ್ವೆ ಪೂರ್ಣ

# ಡೀಮ್ಡ್ ಅರಣ್ಯ ಒತ್ತುವರಿ ತೆರವಿಗೆ ಸರ್ವೆ ಕಾರ್ಯ ಚುರುಕು

-ಕೆ.ಪಿ.ಸಾಗರ್ ರಾಜು

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯಲ್ಲಿ ಪರಿಭಾವಿತ (ಡೀಮ್ಡ್) ಅರಣ್ಯ ಪ್ರದೇಶ ಒತ್ತುವರಿ ತೆರವುಗೊಳಿಸುವ ಕಾರ್ಯಕ್ಕೆ ಅರಣ್ಯ ಇಲಾಖೆ ಸಿದ್ಧತೆ ಮಾಡಿಕೊಳ್ಳುತ್ತಿದೆ. ಜಿಲ್ಲೆಯಲ್ಲಿ ಒಟ್ಟು 18 ಸಾವಿರ ಹೆಕ್ಟೇರ್ ಡೀಮ್ಡ್ ಅರಣ್ಯವಿದ್ದು, ಈಗಾಗಲೇ 11 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಸರ್ವೆ ಕಾರ್ಯ ಪೂರ್ಣಗೊಳಿಸಲಾಗಿದೆ.

ಜಿಲ್ಲೆಯ ನಾನಾ ಭಾಗದಲ್ಲಿ ಅರಣ್ಯ ಇಲಾಖೆ ಗುರುತಿಸಿರುವ ಪರಿಭಾವಿತ ಅರಣ್ಯ ಸಾಕಷ್ಟು ಕಡೆಗಳಲ್ಲಿ ಒತ್ತುವರಿಯಾಗಿದೆ. ತೆರವು ಕಾರ್ಯ ಕೈಗೊಳ್ಳುವುದಕ್ಕೂ ಮೊದಲು ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಅರಣ್ಯ ಇಲಾಖೆ ಮತ್ತು ಕಂದಾಯ ಇಲಾಖೆ ಜಂಟಿ ಸರ್ವೆ ನಡೆಸಿ, ಡೀಮ್ಡ್ ಫಾರೆಸ್ಟ್ ಎಂಬುದು ದೃಢಪಟ್ಟ ಬಳಿಕವಷ್ಟೇ ತೆರವು ಕಾರ್ಯಾಚರಣೆಗೆ ಇಳಿಯಲು ಅಧಿಕಾರಿಗಳು ನಿರ್ಧರಿಸಿದ್ದು, ಮೊದಲ ಹಂತವಾಗಿ ಸರ್ವೆ ಕಾರ್ಯ ಚುರುಕುಗೊಳಿಸಿದ್ದಾರೆ.

ಸುಪ್ರೀಂಕೋರ್ಟ್ ಸೂಚನೆ ಹಿನ್ನಲೆ ಪರಿಭಾವಿತ ಅರಣ್ಯ ಪ್ರದೇಶ ಪುನರ್ ಪರಿಶೀಲನಾ ಕಾರ್ಯ ವೇಗ ಪಡೆದುಕೊಂಡಿದೆ. 2022ರ ವರದಿ ಅನ್ವಯ ರಾಜ್ಯದಲ್ಲಿರುವ ಒಟ್ಟು ಡೀಮ್ಡ್ ಅರಣ್ಯ ಪ್ರದೇಶದ ಬಗ್ಗೆ ನ್ಯಾಯಾಲಯಕ್ಕೆ ವರದಿ ನೀಡಲಾಗಿತ್ತು. ಈ ಹಿನ್ನಲೆ ಪುನರ್ ಪರಿಶೀಲನೆ ನಡೆಸಿ, ವಾಸ್ತವದಲ್ಲಿರುವ ಪರಿಭಾವಿತ ಅರಣ್ಯ ಪ್ರದೇಶವನ್ನು ಗುರುತಿಸಲು ಸಮಿತಿ ರಚನೆ ಮಾಡಲಾಗಿತ್ತು. ಇದೀಗ ಅರಣ್ಯ ಇಲಾಖೆ ಮತ್ತು ಕಂದಾಯ ಇಲಾಖೆ ಜಂಟಿ ಸರ್ವೆ ನಡೆಸಿ, ಡೀಮ್ಡ್ ಅರಣ್ಯ ಪ್ರದೇಶವನ್ನು ಗುರುತಿಸಿ ವರದಿ ಸಲ್ಲಿಸುವಂತೆ ಆದೇಶ ಹೊರಡಿಸಲಾಗಿದೆ.

ಸುಪ್ರೀಂ ಕೋರ್ಟ್ ಸೂಚನೆ ಆಧರಿಸಿ ರಚನೆಯಾಗಿರುವ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಸಮಿತಿ ಕಣ್ಗಾವಲಿನಲ್ಲಿ ಭೂ ಸರ್ವೆ ನಡೆಯುತ್ತಿದೆ. ಅರಣ್ಯ ಪ್ರದೇಶದ ಒತ್ತುವರಿ ಬಿಕ್ಕಟ್ಟು ತೀವ್ರಗೊಂಡಿರುವ ಹೊತ್ತಲ್ಲಿ ಡೀಮ್ಡ್ ಅರಣ್ಯ ಪ್ರದೇಶವನ್ನು ಅರಣ್ಯ ಇಲಾಖೆ ಸುಪರ್ದಿಗೆ ಒಪ್ಪಿಸುವ ಕ್ರಮಕ್ಕೆ ಜಿಲ್ಲೆಯಲ್ಲಿ ತ್ವರಿತ ಕ್ರಮ ಆರಂಭವಾಗಿದೆ.

ಕಂದಾಯ ಇಲಾಖೆ ಆರ್‌ಟಿಸಿ ದಾಖಲೆಯಲ್ಲಿ ಡೀಮ್ಡ್ ಫಾರೆಸ್ಟ್ ಎಂದು ನಮೂದಿಸಿ ಅರಣ್ಯ ಇಲಾಖೆಗೆ ಒಪ್ಪಿಸಲು ಈಗಾಗಲೇ ಅರಣ್ಯ, ಜೀವಿ ಪರಿಸರ ಇಲಾಖೆ ಸರ್ಕಾರದ ಅಧೀನ ಕಾಯದರ್ಶಿ ಸೂಚಿಸಿದ್ದರಿಂದ ಬಹುಕಾಲದಿಂದ ಕಾನೂನಾತ್ಮಕವಾಗಿ ಕಂದಾಯ ಇಲಾಖೆಯಲ್ಲಿ ರೈತರ ವಿಶೇಷ ಹಕ್ಕುಳ್ಳ ಕಾನು, ಖರಾಬ್, ಗೋಮಾಳ ಪ್ರದೇಶ ಸೇರಿ ಕಂದಾಯ ವರ್ಗೀಕೃತ

» ನಾಲ್ಕನೇ ಪುಟದಲ್ಲಿ




### ಜನವಸತಿ ಪ್ರದೇಶದಲ್ಲಿ ವಿರೋಧ

ಜಿಲ್ಲೆಯಲ್ಲಿ ಹಾಸನ, ಸಕಲೇಶಪುರ, ಬೇಲೂರು, ಆಲೂರು, ಚನ್ನರಾಯಪಟ್ಟಣ ಸೇರಿ ನಾನಾ ಕಡೆಗಳಲ್ಲಿ ಡೀಮ್ಡ್ ಅರಣ್ಯ ಒತ್ತುವರಿಯಾಗಿದೆ. ಸಕಲೇಶಪುರ ತಾಲ್ಲೂಕಿನ ಹಾನುಬಾಳು ಹೋಬಳಿ ವ್ಯಾಪ್ತಿಯಲ್ಲಿ 8ಕ್ಕೂ ಹೆಚ್ಚು ಜನವಸತಿ ಗ್ರಾಮಗಳು ಡೀಮ್ಡ್ ಅರಣ್ಯ ವ್ಯಾಪ್ತಿಗೆ ಒಳಪಡುವುದರಿಂದ ಸಾರ್ವನಿಕ ವಲಯದಲ್ಲಿ ಭಾರೀ ವಿರೋಧ ವ್ಯಕ್ತವಾಗಿತ್ತು. ಇದೇ ಕಾರಣಕ್ಕೆ ಆಗಾಗ್ಗೆ ಅರಣ್ಯ ಇಲಾಖೆ ಮತ್ತು ಗ್ರಾಮಸ್ಥರ ನಡುವೆ ಆಗಾಗ್ಗೆ ಕಿತ್ತಾಟಗಳು ನಡೆಯುತ್ತಲೇ ಇರುತ್ತದೆ. ಮಾತ್ರವಲ್ಲದೇ ಡೀಮ್ಡ್ ಅರಣ್ಯ ಪ್ರದೇಶದ ನೆಪವೊಡ್ಡಿ ಅಭಿವೃದ್ಧಿ ಕಾರ್ಯಗಳಿಗೂ ಅಡ್ಡಿಯುಂಟಾಗಿದೆ.

> ಜಿಲ್ಲೆಯಲ್ಲಿ 18 ಸಾವಿರ ಹೆಕ್ಟೇರ್‌ನಲ್ಲಿ ಡೀಮ್ಡ್ ಅರಣ್ಯವನ್ನು ಗುರುತಿಸಿ, 11 ಸಾವಿರ ಹೆಕ್ಟೇರ್‌ಗೂ ಹೆಚ್ಚಿನ ಪ್ರದೇಶದಲ್ಲಿ ಸರ್ವೆ ಕಾರ್ಯ ನಡೆಸಲಾಗಿದೆ. ಇನ್ನೂ 6 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಸರ್ವೆ ನಡೆಬೇಕಿದೆ. ಸರ್ಕಾರ ಸೂಚನೆ ಮೇರೆಗೆ ಈಗಾಗಲೇ ಒತ್ತುವರಿಯಾಗಿರುವುದನ್ನು ತೆರವುಗೊಳಿಸಲು ಕ್ರಮ ವಹಿಸಲಾಗಿದೆ. ಹೊಸದಾಗಿ ಒತ್ತುವರಿಯಾಗಿರುವುದು ಕಂಡು ಬಂದರೆ ತಕ್ಷಣ ತೆರವುಗೊಳಿಸಲಾಗುವುದು.
> -ಸೌರಭ್‌ಕುಮಾರ್, ಉಪ ಅರಣ್ಯ ಸಂರಕ್ಷಣಾಧಿಕಾರಿ



### ರೈತರು ಬೇಡವೆಂದರೆ ಟೌನ್‌ಶಿಪ್ ಯೋಜನೆ ವಾಪಾಸ್

• ಪ್ರಜೋದಯ ವರದಿ

**ಹುಬ್ಬಳ್ಳಿ:** ಬಿಡದಿಯಲ್ಲಿ ಟೌನ್‌ಶಿಪ್ ಸ್ಥಾಪನೆ ಬೇಡವೆಂದು ನಿಜವಾದ ರೈತರು ಹೇಳಿದರೆ, ನಾವು ಆ ಯೋಜನೆ ಕೈ ಬಿಡುತ್ತೇವೆಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಅವರು ಹೇಳಿದರು.

ಸುದ್ದಿಗಾರರೊಂದಿಗೆ ಬುಧವಾರ ಮಾತನಾಡಿದ ಅವರು, ಬಿಡದಿ ಟೌನ್‌ಶಿಪ್ ಕುರಿತು ರಾಜಕೀಯ ಹೋರಾಟ ನಡೆದಿದೆ. ರೈತರು ಬೇಡವೆಂದರೆ, ನಾವು ಅಲ್ಲಿ ಟೌನ್‌ಶಿಪ್ ಮಾಡುವುದಿಲ್ಲ. ಕೃಷಿ ಭೂಮಿಯ ಸ್ವಾಧೀನಕ್ಕೆ, ಮಾರುಕಟ್ಟೆಯ ದರಕ್ಕಿಂತ ಮೂರು ಪಟ್ಟು ಹಣ ನೀಡಬೇಕೆಂದು ತಿಳಿಸಿದರು. ಕಾಂಗ್ರೆಸ್‌ನಲ್ಲಿ ಪ್ರತಿಯೊಬ್ಬ ಶಾಸಕರಿಗೂ ಸಚಿವರಾಗುವ ಮುಕ್ತ ಅವಕಾಶವಿದೆ. ಕೆಲ ಶಾಸಕರ ಅಭಿಮಾನಿಗಳು, ತಮ್ಮ ಶಾಸಕರಿಗೆ ಸಚಿವ ಸ್ಥಾನ ನೀಡುವಂತೆ ಹಕ್ಕೊತ್ತಾಯ ಮಾಡಿದ್ದಾರೆ. ಜನಾಭಿಪ್ರಾಯ ಪರಿಗಣಿಸಿ ಸಮತೋಲನದ ಆಧಾರದ ಮೇಲೆ ಪಕ್ಷದ ಚೌಕಟ್ಟಿನಲ್ಲಿ ಸಚಿವ ಸ್ಥಾನ ನೀಡಲಾಗುವುದು ಎಂದರು.

CMYK CMYK CMYK CMYK

# ಅಳಿವಿನ ಅಂಚಿನಲ್ಲಿ ಜಾನಪದಗಳು

ಒಂದು ಕಾಲದಲ್ಲಿ ಅತ್ಯಂತ ಜನಪ್ರೀಯವಾದ ಜನಪದ ಸಾಹಿತ್ಯವು, ಇಂದು ಕಾನ್ವೆಂಟ್ ಸ್ಕೂಲ್‌ಗಳ ಇಂಗ್ಲಿಷ್ ವ್ಯಾಮೋಹದಿಂದ , ಡಿಜೆ ಸಾಂಗ್‌ಗಳ ಭರಾಟೆಯಿಂದ, ಧಾರವಾಹಿಗಳ ದರ್ಪದಿಂದ, ಲೈವ್ ಶೋಗಳ ಶೋಕಿಯಿಂದ, ಸೊರಗಿ ಸುಣ್ಣವಾಗಿ, ಇತಿಹಾಸದ ಪುಟಗಳಲ್ಲಿ ಲೀನಾವಾಗುತ್ತಿದೆ.

ಈ ಜಾನಪದಗಳಲ್ಲಿ, ಮಾನವೀಯ ಸಂಬಂಧಗಳ ಮೌಲ್ಯಗಳನ್ನು, ಸಂಸ್ಕಾರವನ್ನು, ಧಾರ್ಮಿಕ ಪರಂಪರೆಯನ್ನು ಸರಳವಾಗಿ ಮತ್ತು ಮರ್ಮಿಕವಾಗಿ ಮುಂದಿನ ಪೀಳಿಗೆಗೆ ತಿಳುಸುವ ತತ್ವವಿದೆ, ಸತ್ವವಿದೆ, ಸಾಹಿತ್ಯದ ರಸದೌತಣವಿದೆ. ಆಗಿನ ಹೆಣ್ಣುಮಕ್ಕಳು ತಮ್ಮ ಮನದಾಳದ ಭಾವನೆಗಳನ್ನು, ದುಗುಡು ದುಮ್ಮಾನಗಳನ್ನು, ಅಂತರಾಳದ ಅಭಿಪ್ರಾಯಗಳನ್ನು ಇಂತಹ ಜಾನಪದಗಳ ಮೂಲಕ ವ್ಯಕ್ತಪಡಿಸುತ್ತಿದ್ದರು, ಅಂತಹ ಕೆಲವೊಂದು ನುಡಿಗಳು ಇಲ್ಲಿವೆ.

ಬ್ಯಾಸಗಿ ದಿವಸಕ್ಕ, ಬೇವಿನ ಮರ ತಂಪ, ಭೀಮಾ ರತಿ ಎಂಬ ಹೊಳೆ ತಂಪ, ಭೀಮಾ ರತಿ ಎಂಬ ಹೊಳೆ ತಂಪ, ಹಡೆದವ್ವ, ನೀ ತಂಪ ನನ್ನ ತವರೀಗೆ....

ಯಾರೂ ಇದ್ದರೂ ನನ್ನ ತಯಾವ್ವನ ಹೋಲರು, ಸಾವಿರ ಕೊಳ್ಳಿ ಒಲೆಯಾಗ, ಸಾವಿರ ಕೊಳ್ಳಿ ಒಲೆಯಾಗ, ಇದ್ದರೂ ಜ್ಯೋತಿ ನಿನ್ನ ಯಾರು ಹೋಲುವರ.....

ತಾಯಿ ಇಲ್ಲದ ಮನೆಗೆ, ಹೋಗದಿರು ನನ್ನ ಮನವೇ ನೀರಿಲ್ಲದ ಕೆರೆಗೆ ಕರು ಬಂದು,

ನೀರಿಲ್ಲದ ಕೆರೆಗೆ ಕರು ಬಂದು, ತಿರುಗಾಗ ಆಗ ನೋಡದರ ದುಃಖಗಳ...


ಹೆಣ್ಣು ಮಕ್ಕಳ ದುಃಖ, ಹೆತ್ತವ್ವ ಬಲ್ಲಳು, ಹುತ್ತದ ಒಳಗಿರೋ ಸರುಪನ ಹುತ್ತದ ಒಳಗಿರೋ ಸರುಪನ, ಬೇಗೆಯ ನೆತ್ತಿಯ ಮೇಲಿರುವ ಶಿವ ಬಲ್ಲ....

ತಾಯವ್ವನ ನೆನೆಯೂದು, ಯಾ ವ್ಯಾಳೆ ಯಾ ಹೊತ್ತ, ಊರೆಲ್ಲ ಉಂಡು ಮಲಗಾನ,

ಊರೆಲ್ಲ ಉಂಡು ಮಲಗಾನ, ಬೆಳ್ಳಿಚಿಕ್ಕಿ ಹೊಂಡಾಗ ಹಡೆದವ್ವನ ನೆನದೇನ....

ತಾಯವ್ವಗ ಬೈಬ್ಯಾಡ ತಿಳಿಗೇಡಿ ನನ್ನ ತಮ್ಮ ಬಾಳ ದಿನದಾಕಿ ಹಡೆದವ್ವ, ಬಾಳ ದಿನದಾಕಿ ಹಡೆದವ್ವನ ಬೈದರ ಬಾಳ ಮರುಗ್ಯಾಳ ಮನದಾಗ...

**- ಶ್ರೀ ಸಂಗಮೇಶ** ಕೆರೂಟಗಿ



“ ಪ್ರಾಂತ್ಯೀಯ ಹಣಕಾಸಿನ ಹಂಚಿಕೆ, ಕೇಂದ್ರ ಮತ್ತು ರಾಜ್ಯಗಳ ನಡುವೆ ಅಧಿಕಾರದ ಅಸಮತೋಲನ, ಹಾಗೂ ಆಡಳಿತದ ಅಸಮರ್ಥತೆಗಳನ್ನು ಅವರು ವೈಜ್ಞಾನಿಕವಾಗಿ ವಿಶ್ಲೇಷಿಸಿದ್ದರು. ಈ ಪ್ರಬಂಧದಲ್ಲಿ ಅಂಬೇಡ್ಕರ್ ಅವರು ಪ್ರಾರಂಭದಲ್ಲಿ ಅಂದಿನ ಭಾರತದಲ್ಲಿ ಹಣಕಾಸು ವ್ಯವಸ್ಥೆ ಸಂಪೂರ್ಣವಾಗಿ ಕೇಂದ್ರದ ನಿಯಂತ್ರಣದಲ್ಲಿದ್ದುದನ್ನು ವಿವರಿಸುತ್ತಾರೆ.

# ಇಂದಿಗೂ ಸಲ್ಲುವ ಡಾ. ಅಂಬೇಡ್ಕರ್ ಸಂಶೋಧನೆ

ಸಮ ಸಮಾಜ ವಿಶ್ವವಿದ್ಯಾಲಯಗಳು, ಸಂಶೋಧನಾ ಸಂಸ್ಥೆಗಳು, ನೀತಿ ರೂಪಿಸುವ ಸಂಸ್ಥೆಗಳು ಅಂಬೇಡ್ಕರ್ ಅವರ ಪಿಎಚ್ .ಡಿ ಕೃತಿಯನ್ನು ಪುನರ್ ಪರಿಶೀಲಿಸುವ ಅಗತ್ಯವಿದೆ. ಈ ಸಂಬಂಧ ಸಮ್ಮೇಳನಗಳು, ಕಾರ್ಯಾಗಾರಗಳು ಮತ್ತು ಪ್ರಕಟಣೆಗಳು ಆಯೋಜನೆಯಾಗಬೇಕು. ಅವರ ಆಲೋಚನೆಗಳನ್ನು ಈ ಕಾಲದ ಸವಾಲುಗಳೊಂದಿಗೆ ಸಂಪರ್ಕಿಸುವ, ಕೃತಿಯನ್ನು ವ್ಯಾಪಕವಾಗಿ ಜನರಿಗೆ ತಲುಪಿಸುವ ಪ್ರಯತ್ನ ನಡೆಯಬೇಕು.

2026ನೇ ವರ್ಷದ ಜೂನ್ ಭಾರತೀಯ ಇತಿಹಾಸದಲ್ಲಿ ಒಂದು ಮಹತ್ವದ ಬೌದ್ಧಿಕ ಮೈಲುಗಲ್ಲಿನ 99ನೇ ವಾರ್ಷಿಕೋತ್ಸವವನ್ನು ಸೂಚಿಸುತ್ತದೆ. 1927ರ ಜೂನ್‌ನಲ್ಲಿ ಡಾ. ಅಂಬೇಡ್ಕರ್ ಅವರಿಗೆ ಕೊಲಂಬಿಯಾ ವಿಶ್ವವಿದ್ಯಾಲಯದಿಂದ ಡಾಕ್ಟರ್ ಆಫ್ ಫಿಲಾಸಫಿ ಪದವಿ ಕೊಡಲಾಯಿತು. ಇದು ಕೇವಲ ಒಂದು ವೈಯಕ್ತಿಕ ಶೈಕ್ಷಣಿಕ ಸಾಧನೆಯ ಸ್ಮರಣೆ ಮಾತ್ರವಲ್ಲ; ಇದು ಭಾರತದ ಸಾಮಾಜಿಕ ನ್ಯಾಯ, ಸಮಾನತೆ ಮತ್ತು ಪ್ರಜಾಸತ್ತಾತ್ಮಕ ಚಿಂತನೆಗಳ ಹೊಸ ಯುಗಕ್ಕೆ ಚಾಲನೆ ನೀಡಿದ ಬೌದ್ಧಿಕ ಕ್ರಾಂತಿಯ ಸ್ಮರಣೆಯಾಗಿದೆ ಎನ್ನಬಹುದು.

ಡಾ.ಅಂಬೇಡ್ಕರ್ ಅವರ ಪಿಎಚ್.ಡಿ. ಪ್ರಬಂಧ ಬ್ರಿಟಿಷ್ ಭಾರತದಲ್ಲಿ ಪ್ರಾಂತ್ಯೀಯ ಹಣಕಾಸಿನ ವಿಕಾಸ ಎಂಬ ವಿಷಯದ ಮೇಲೆ ಆಧಾರಿತವಾಗಿತ್ತು. ಈ ಕೃತಿ ಆರ್ಥಿಕ ಶಾಸ್ತ್ರ ಮತ್ತು ಸಾರ್ವಜನಿಕ ಹಣಕಾಸು ಕ್ಷೇತ್ರಗಳಲ್ಲಿ ಮಹತ್ವದ ಸಂಶೋಧನಾ ಕೃತಿಯಾಗಿದೆ. ಬ್ರಿಟಿಷರ ಆಳ್ವಿಕೆಯಲ್ಲಿದ್ದ ಭಾರತದ ಆಡಳಿತಾತ್ಮಕ ಮತ್ತು ಹಣಕಾಸು ವ್ಯವಸ್ಥೆಗಳ ಬಗ್ಗೆ ಅವರು ನೀಡಿದ ವಿಶ್ಲೇಷಣೆ ಆ ಕಾಲದ ಶೋಷಣಾತ್ಮಕ ನೀತಿಗಳನ್ನು ಬಹಿರಂಗಪಡಿಸಿತು.

ಪ್ರಾಂತ್ಯೀಯ ಹಣಕಾಸಿನ ಹಂಚಿಕೆ, ಕೇಂದ್ರ ಮತ್ತು ರಾಜ್ಯಗಳ ನಡುವೆ ಅಧಿಕಾರದ ಅಸಮತೋಲನ, ಹಾಗೂ ಆಡಳಿತದ ಅಸಮರ್ಥತೆಗಳನ್ನು ಅವರು ವೈಜ್ಞಾನಿಕವಾಗಿ ವಿಶ್ಲೇಷಿಸಿದ್ದರು. ಈ ಪ್ರಬಂಧದಲ್ಲಿ ಅಂಬೇಡ್ಕರ್ ಅವರು ಪ್ರಾರಂಭದಲ್ಲಿ ಅಂದಿನ ಭಾರತದಲ್ಲಿ ಹಣಕಾಸು ವ್ಯವಸ್ಥೆ ಸಂಪೂರ್ಣವಾಗಿ ಕೇಂದ್ರದ ನಿಯಂತ್ರಣದಲ್ಲಿದ್ದುದನ್ನು ವಿವರಿಸುತ್ತಾರೆ. ನಂತರ ಕ್ರಮೇಣ ಪ್ರಾಂತ್ಯಗಳಿಗೆ ಕೆಲವು ಅಧಿಕಾರಗಳನ್ನು ಹಂಚಿಕೆಯಾಗಿದೆಯಾದರೂ ಅದು ನಿಜವಾದ ಸ್ವಾಯತ್ತತೆಯಾಗಿರಲಿಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತಾರೆ. ಅವರ ವಿಶ್ಲೇಷಣೆಯ ಪ್ರಕಾರ, ಪ್ರಾಂತ್ಯಗಳಿಗೆ ಶಿಕ್ಷಣ, ಆರೋಗ್ಯ, ಆಡಳಿತ ಮುಂತಾದ ಪ್ರಮುಖ ಹೊಣೆಗಾರಿಕೆಗಳನ್ನು ನೀಡಲಾಗಿದ್ದರೂ, ಅವುಗಳಿಗೆ ಅಗತ್ಯವಾದ ಆದಾಯ ಮೂಲಗಳನ್ನು ನೀಡಲಾಗಲಿಲ್ಲ, ಇದರಿಂದಾಗಿ ಪ್ರಾಂತ್ಯಗಳು ಆರ್ಥಿಕವಾಗಿ ದುರ್ಬಲವಾಗಿದ್ದು ಕೇಂದ್ರದ ಮೇಲೆ ಅವಲಂಬಿತವಾಗುವ ಪರಿಸ್ಥಿತಿ ನಿರ್ಮಾಣ ವಾಯಿತು ಎಂದು ಅಂಬೇಡ್ಕರ್ ಹೇಳುತ್ತಾರೆ.

ಅಂಬೇಡ್ಕರ್ ಅವರು ಈ ಸ್ಥಿತಿಯನ್ನು ಕೇವಲ ಆಡಳಿತಾತ್ಮಕ ವ್ಯವಸ್ಥೆಯ ಭಾಗವಲ್ಲ, ಆದರೆ ಒಂದು ಉದ್ದೇಶಿತ ಕಾಲನಿಯ ನೀತಿಯ ಪರಿಣಾಮವೆಂದು ವಿಮರ್ಶಿಸುತ್ತಾರೆ. ಏಕೆಂದರೆ ಬ್ರಿಟಿಷರು ಭಾರತದ ಪ್ರಾಂತ್ಯಗಳಿಗೆ ಸಂಪೂರ್ಣ ಹಣಕಾಸು ಸ್ವಾತಂತ್ರ್ಯ ನೀಡಲು ಇಚ್ಛಿಸಿರಲಿಲ್ಲ. ಅವರು ಆದಾಯ ಹಂಚಿಕೆ ವ್ಯವಸ್ಥೆಯಲ್ಲಿ ಸಮತೋಲನದ ಕೊರತೆ ಇದೆ ಎಂದು ಸೂಚಿಸಿ, ಕೇಂದ್ರ ಮತ್ತು ಪ್ರಾಂತ್ಯಗಳ ನಡುವಿನ ಹಣಕಾಸಿನ ಸಂಬಂಧವು ನ್ಯಾಯಸಮ್ಮತವಾಗಿರಬೇಕು ಎಂದು ವಾದಿಸುತ್ತಾರೆ.

ಪ್ರಾಂತ್ಯಗಳಿಗೆ ನೀಡಲಾದ ಆದಾಯ ಮೂಲಗಳು ಕಡಿಮೆಯಾಗಿದ್ದು, ಹೆಚ್ಚಿನ ಆದಾಯ ತರುವ ಮೂಲಗಳು ಕೇಂದ್ರದ ಹಸ್ತದಲ್ಲಿಯೇ ಉಳಿದಿದ್ದರಿಂದ, ಇದು ಲಂಬ ಅಸಮಾನತೆಯನ್ನು ಉಂಟುಮಾಡಿದೆ ಎಂದು ಅಂಬೇಡ್ಕರ್ ವಿವರಿಸುತ್ತಾರೆ. ಈ ಹಿನ್ನೆಲೆಯಲ್ಲಿ, ಅಂಬೇಡ್ಕರ್ ಅವರು ಉತ್ತಮ ಸಾರ್ವಜನಿಕ ಹಣಕಾಸು ವ್ಯವಸ್ಥೆಗೆ ಸಮಾನತೆ, ಹೊಣೆಗಾರಿಕೆ ಮತ್ತು ಪರಿಣಾಮಕಾರಿತ್ವ ಎಂಬ ತತ್ವಗಳು ಅವಶ್ಯಕವೆಂದು ಸೂಚಿಸುತ್ತಾರೆ.

ಅವರ ಪ್ರಬಂಧವು ಕೇವಲ ಆರ್ಥಿಕ ವಿಶ್ಲೇಷಣೆಯಷ್ಟೇ ಅಲ್ಲ, ಅದು ಸಾಮಾಜಿಕ ನ್ಯಾಯದ ದೃಷ್ಟಿ ಕೋನದಿಂದ ಕೂಡಿತ್ತು ಎನ್ನಬಹುದು. ಏಕೆಂದರೆ ಆರ್ಥಿಕ ಅಸಮಾನತೆ ಸಮಾಜದ ಅನ್ಯಾಯಕ್ಕೆ ಕಾರಣವಾಗುತ್ತದೆ ಎಂಬುದನ್ನು ಅವರು ಅರ್ಥ ಮಾಡಿಕೊಂಡಿದ್ದರು. ಅವರ ಈ ಸಂಶೋಧನೆ ಮುಂದಿನ ದಿನಗಳಲ್ಲಿ ಭಾರತದ ಸಂವಿಧಾನ ರಚನೆಯಲ್ಲಿ ಅವರ ಪಾತ್ರಕ್ಕೆ ಬಲವಾದ ಬೌದ್ಧಿಕ ನೆಲೆಯನ್ನು ಒದಗಿಸಿತು.

ವಿಶೇಷವಾಗಿ ಕೇಂದ್ರ-ರಾಜ್ಯ ಆಡಳಿತಾತ್ಮಕ ಸಂಬಂಧಗಳ ವಿನ್ಯಾಸದಲ್ಲಿ ಅವರ ಆಲೋಚನೆಗಳು ಇಂದಿಗೂ ಪ್ರತಿಫಲಿಸುತ್ತವೆ. ಒಟ್ಟಾರೆ, ಈ ಪ್ರಬಂಧದ ಮುಖ್ಯ ಅರ್ಥವೆಂದರೆ ನಿಜವಾದ ವಿಕೇಂದ್ರೀಕರಣ ಎಂದರೆ ಕೇವಲ ಆಡಳಿತಾಧಿಕಾರ ಹಂಚಿಕೆ ಅಲ್ಲ, ಆದರೆ ಪ್ರಾಂತ್ಯಗಳಿಗೆ/ ರಾಜ್ಯಗಳಿಗೆ ಸಮರ್ಪಕ ಹಣಕಾಸು ಸ್ವಾಯತ್ತತೆ ಮತ್ತು ನ್ಯಾಯಯುತ ಸಂಪನ್ಮೂಲ ಹಂಚಿಕೆ ಒದಗಿಸುವುದಾಗಿದೆ ಎಂಬುದಾಗಿದೆ. ಆದರೆ ಇದು ಇಂದಿಗೂ ಭಾರತದಲ್ಲಿ ಸರಿಯಾಗಿ ಜಾರಿಗೆ ಬಂದಿಲ್ಲ.

ಅಂಬೇಡ್ಕರ್ ಅವರ ಪಿಎಚ್.ಡಿ. ಸಂಶೋಧನೆಯು ಇಂದಿನ ಕಾಲದಲ್ಲಿಯೂ ಅತ್ಯಂತ ಪ್ರಸ್ತುತವಾಗಿದ್ದು, ವಿಶೇಷವಾಗಿ ಭಾರತದ ಹಣಕಾಸು ವ್ಯವಸ್ಥೆ, ರಾಜ್ಯ-ರಾಜ್ಯಗಳ ನಡುವಿನ ವ್ಯಾಜ್ಯ, ಕೇಂದ್ರ ರಾಜ್ಯ ಸಂಬಂಧಗಳು ಮತ್ತು ಸಾಮಾಜಿಕ ನ್ಯಾಯದ ಚರ್ಚೆಗಳಲ್ಲಿ ಅದರ ಪ್ರಭಾವ ಸ್ಪಷ್ಟವಾಗಿ ಕಾಣಿಸುತ್ತದೆ. ಅವರ ಪ್ರಬಂಧದಲ್ಲಿ ಪ್ರಾಂತ್ಯಗಳಿಗೆ ನೀಡಲಾದ ಹೊಣೆಗಾರಿಕೆಗಳಿಗೆ ಅನುಗುಣವಾಗಿ ಹಣಕಾಸು ಸಂಪನ್ಮೂಲಗಳನ್ನು ನೀಡದಿರುವ ಸಮಸ್ಯೆಯನ್ನು ಅವರು ಎತ್ತಿ ಹಿಡಿದಿದ್ದು, ಇದೇ ಸಮಸ್ಯೆ ಇಂದಿಗೂ ಕೇಂದ್ರ ಮತ್ತು ರಾಜ್ಯಗಳ ನಡುವಿನ ಹಣಕಾಸಿನ ಹಂಚಿಕೆ ವಿಚಾರದಲ್ಲಿ ಕಾಣಿಸುತ್ತದೆ.

ಉದಾಹರಣೆಗೆ, ತೆರಿಗೆ ಸಂಗ್ರಹಣೆಯಲ್ಲಿ ಕೇಂದ್ರದ ಪಾಲು ಹೆಚ್ಚಾಗಿದ್ದು, ರಾಜ್ಯಗಳು ಅನೇಕ ಕಲ್ಯಾಣ ಯೋಜನೆಗಳನ್ನು ಜಾರಿಗೆ ತರುವ ಹೊಣೆಗಾರಿಕೆಯನ್ನು ಹೊತ್ತುಕೊಂಡಿರುವ ಪರಿಸ್ಥಿತಿ ಅಂಬೇಡ್ಕರ್ ಅವರು ಸೂಚಿಸಿದ್ದ ಅಸಮತೋಲನವನ್ನು ನೆನಪಿಸುತ್ತದೆ ಎನ್ನಬಹುದು.

ಅಂಬೇಡ್ಕರ್ ಅವರ ಆಲೋಚನೆಗಳು ಇಂದಿನ ಹಣಕಾಸು ಆಯೋಗ ಶಿಫಾರಸುಗಳು, ಜಿಎಸ್‌ಟಿ ವ್ಯವಸ್ಥೆ ಮತ್ತು ಕೇಂದ್ರ-ರಾಜ್ಯ ಆರ್ಥಿಕ ಸಂಬಂಧಗಳ ಚರ್ಚೆಗಳಲ್ಲಿ ಪ್ರತಿಧ್ವನಿಸುತ್ತವೆ. ಏಕೆಂದರೆ ಅವರು ತಮ್ಮ ಮಹಾ ಪ್ರಬಂಧದಲ್ಲಿ ಒತ್ತಿ ಹೇಳಿದ ಹೊಣೆಗಾರಿಕೆಗೆ ಅನುಗುಣವಾದ ಸಂಪನ್ಮೂಲ ಹಂಚಿಕೆ ಎಂಬ ತತ್ವವು ಇಂದಿನ ಸಾರ್ವಜನಿಕ ನೀತಿ ಚರ್ಚೆಗಳ ಕೇಂದ್ರ ಬಿಂದುವಾಗಿದೆ.

ಅಂಬೇಡ್ಕರ್ ಅವರು ನಿಜವಾದ ವಿಕೇಂದ್ರೀಕರಣಕ್ಕೆ ಕೇವಲ ಅಧಿಕಾರ ಹಂಚಿಕೆ ಸಾಕಾಗುವುದಿಲ್ಲ, ಹಣಕಾಸು ಸ್ವಾಯತ್ತತೆಯೂ ಅಗತ್ಯ ವೆಂದು ಹೇಳಿದ ವಿಚಾರ ಇಂದಿನ ಆಡಳಿತದಲ್ಲಿ ಅತ್ಯಂತ ಮಹತ್ವದ್ದಾಗಿದೆ. ಆದರೆ ಅದನ್ನು ಗಮನಿಸಿ ದವರ ಸಂಖ್ಯೆ ಕಡಿಮೆ. ಇದರ ಜೊತೆಗೆ, ಅವರ ಸಂಶೋಧನೆ ಸಾಮಾಜಿಕ ನ್ಯಾಯದ ದೃಷ್ಟಿಕೋನಕ್ಕೂ ಸಹ ಸಂಬಂಧಿಸಿದೆ.




ಆರ್ಥಿಕ ಅಸಮಾ ನತೆ ಸಾಮಾಜಿಕ ಅಸಮಾನತೆಯನ್ನು ಹೆಚ್ಚಿಸುತ್ತದೆ ಎಂಬ ಅವರ ವಾದ ಇಂದಿನ ಭಾರತದಲ್ಲಿ ಬಡತನ, ಪ್ರಾದೇಶಿಕ ಅಂತರ ಮತ್ತು ಹಿಂದುಳಿದ ವರ್ಗಗಳ ಅಭಿವೃದ್ಧಿ ಕುರಿತ ಚರ್ಚೆಗಳಲ್ಲಿ ಪ್ರಸ್ತುತವಾಗುತ್ತದೆ.

ಸರ್ಕಾರದ ಜನಕಲ್ಯಾಣ ಯೋಜನೆಗಳು, ಸಮಾನ ಅವಕಾಶಗಳ ನೀತಿಗಳು ಮತ್ತು ಒಳಗೊಂಡ ಅಭಿವೃದ್ಧಿಯ ಪರಿಕಲ್ಪನೆಗಳು ಅಂಬೇಡ್ಕರ್ ಅವರ ಆಲೋಚನೆಗಳನ್ನೇ ಪ್ರತಿಬಿಂಬಿಸುತ್ತವೆ ಎನ್ನಬಹುದು.

ಅಂಬೇಡ್ಕರ್‌ರವರ ಸಾಧನೆಯ ಮಹತ್ವವನ್ನು ನಾವು ಆ ಕಾಲದ ಸಾಮಾಜಿಕ ಹಿನ್ನೆಲೆಯ ಬೆಳಕಿನಲ್ಲಿ ನೋಡುವುದಾದರೆ ಇನ್ನಷ್ಟು ಸ್ಪಷ್ಟವಾಗುತ್ತದೆ. ಅತೀ ಹಿಂದುಳಿದ ಮತ್ತು ಸಾಮಾಜಿಕವಾಗಿ ತಿರಸ್ಕೃತ ವರ್ಗದಲ್ಲಿ ಜನಿಸಿದ ಅಂಬೇಡ್ಕರ್ ಅವರು ವಿಶ್ವದ ಅತ್ಯಂತ ಪ್ರಸಿದ್ಧ ವಿಶ್ವವಿದ್ಯಾಲಯಗಳಲ್ಲಿ ಒಂದಾದ ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ಉನ್ನತ ಶಿಕ್ಷಣ ಪಡೆಯುವುದು ಸ್ವತಃ ಒಂದು ಕ್ರಾಂತಿಕಾರಿ ಹೆಜ್ಜೆಯಾಗಿತ್ತು.

ಅವರ ವಿದ್ಯಾಭ್ಯಾಸದ ಪಯಣವು ಕೇವಲ ವೈಯಕ್ತಿಕ ಸಾಧನೆಯಲ್ಲ, ಅದು ಸಮಾಜದ ಕಟ್ಟು ನಿಟ್ಟಿನ ಜಾತಿ ವ್ಯವಸ್ಥೆಗೆ ಸವಾಲು ಹಾಕಿದ ಒಂದು ಬಲವಾದ ಘೋಷಣೆ ಮತ್ತು ಅದನ್ನು ಅಂಬೇಡ್ಕರ್ ಮೀರಿದ್ದರು. ಅಂಬೇಡ್ಕರ್ ಅವರ ಪಿಎಚ್.ಡಿ. ಸಾಧನೆಯು ಅಂದು ಅನೇಕರಿಗೆ ಪ್ರೇರಣೆಯಾಯಿತು.

ವಿಶೇಷವಾಗಿ ಹಿಂದುಳಿದ ಸಮುದಾಯದ ವಿದ್ಯಾರ್ಥಿಗಳಿಗೆ ಅದು ಶಿಕ್ಷಣದ ಮೂಲಕ ಸಾಮಾಜಿಕ ಮುಕ್ತಿ ಸಾಧ್ಯವೆಂಬ ವಿಶ್ವಾಸವನ್ನು ಮೂಡಿಸಿತು. ಶಿಕ್ಷಣವೇ ಶಕ್ತಿ ಎಂಬ ಅವರ ನಂಬಿಕೆ ಈ ಸಾಧನೆಯ ಮೂಲಕ ಸ್ಪಷ್ಟವಾಗಿ ವ್ಯಕ್ತವಾಯಿತು. ಜ್ಞಾನವನ್ನು ಸಾಮಾಜಿಕ ಪರಿವರ್ತನೆಯ ಸಾಧನವಾಗಿ ಬಳಸಬೇಕೆಂಬ ಸಂದೇಶವನ್ನು ಅವರು ತಮ್ಮ ಜೀವನದ ಮೂಲಕ ನೀಡಿದ್ದರು. ಅಂಬೇಡ್ಕರ್ ಅವರ ಪಿಎಚ್.ಡಿಯ 99ನೇ ವಾರ್ಷಿಕೋತ್ಸವವು ಕೇವಲ ಒಂದು ಆಚರಣೆಗಷ್ಟೇ ಸೀಮಿತವಾಗಿರಬಾರದು. ಅದು ಚಿಂತನೆಗೆ ಪ್ರೇರಣೆ ನೀಡುವ ಸಂದರ್ಭವಾಗಬೇಕು. ಅಂಬೇಡ್ಕರ್ ಅವರ ಆಲೋಚನೆಗಳು ಇಂದಿಗೂ ಸಮಕಾಲೀನವಾಗಿವೆ. ಭಾರತವು ಇನ್ನೂ ಸಾಮಾಜಿಕ ಅಸಮಾನತೆ, ಆರ್ಥಿಕ ಅಂತರ, ಹಾಗೂ ಶಿಕ್ಷಣದ ಅಸಮಾನ ಪ್ರವೇಶ ಇಂತಹ ಸಮಸ್ಯೆಗಳನ್ನು ಎದುರಿಸುತ್ತಿದೆ. ಈ ಸಂದರ್ಭದಲ್ಲಿ ಅಂಬೇಡ್ಕರ್ ಅವರ ತತ್ವಗಳು ಮತ್ತು ಅವರ ಸಂಶೋಧನಾ ದೃಷ್ಟಿಕೋನವು ನಮಗೆ ಮಾರ್ಗದರ್ಶನ ನೀಡುತ್ತವೆ.

ಅವರ ಪಿಎಚ್.ಡಿ. ಸಂಶೋಧನೆಯು ನಂತರ ಅವರ ರಾಜಕೀಯ ಮತ್ತು ಕಾನೂನು ಕ್ಷೇತ್ರದ ಕಾರ್ಯಗಳಿಗೆ ಬಲವಾದ ನೆಲೆಯಾಯಿತು. ಭಾರತದ ಸಂವಿಧಾನದ ಶಿಲ್ಪಿಯಾಗಿ ಅವರು ಸಮಾನತೆ, ಸ್ವಾತಂತ್ರ್ಯ ಮತ್ತು ಸಹೋದರತ್ವದ ಮೌಲ್ಯಗಳನ್ನು ದೇಶದ ಆಡಳಿತ ವ್ಯವಸ್ಥೆಯಲ್ಲಿ ಪ್ರತಿಷ್ಠಾಪಿಸಿದರು. ಅವರ ಬೌದ್ಧಿಕ ಸಾಮರ್ಥ್ಯವು ಕೇವಲ ಒಂದು ಕ್ಷೇತ್ರಕ್ಕೆ ಸೀಮಿತವಾಗಿರಲಿಲ್ಲ; ಅದು ಸಮಾಜದ ವಿವಿಧ ಆಯಾಮಗಳನ್ನು ಸ್ಪರ್ಶಿಸಿತು ಎನ್ನಬಹುದು.

2027ರಲ್ಲಿ ನಡೆಯಲಿರುವ ಶತಮಾನೋತ್ಸವದ ಹಿನ್ನೆಲೆಯಲ್ಲಿ 2026ನೇ ವರ್ಷದ 99ನೇ ವಾರ್ಷಿಕೋತ್ಸವವು ಒಂದು ಪೂರ್ವಭಾವಿ ಚಿಂತನೆಯ ಕಾಲವಾಗಿದೆ. ವಿಶ್ವವಿದ್ಯಾಲಯಗಳು, ಸಂಶೋಧನಾ ಸಂಸ್ಥೆಗಳು ಮತ್ತು ನೀತಿ ರೂಪಿಸುವ ಸಂಸ್ಥೆ ಗಳು ಅಂಬೇಡ್ಕರ್ ಅವರ ಪಿಎಚ್.ಡಿ. ಕೃತಿಯನ್ನು ಪುನರ್ ಪರಿಶೀಲನೆ ಮಾಡುವ ಅಗತ್ಯವಿದೆ. ಈ ಸಂಬಂಧ ಸಮ್ಮೇಳನಗಳು, ಕಾರ್ಯಾಗಾರಗಳು ಮತ್ತು ಪ್ರಕಟಣೆಗಳು ಆಯೋಜನೆಯಾಗಬೇಕು. ಅವರ ಆಲೋಚನೆಗಳನ್ನು ಇಂದಿನ ಕಾಲದ ಸವಾಲುಗಳೊಂದಿಗೆ ಸಂಪರ್ಕಿಸುವ ಪ್ರಯತ್ನಗಳು ನಡೆಯಬೇಕು.

ಇಂದಿನ ಡಿಜಿಟಲ್ ಯುಗದಲ್ಲಿ, ಅಂಬೇಡ್ಕರ್ ಅವರ ಕೃತಿಗಳನ್ನು ಹೆಚ್ಚು ವ್ಯಾಪಕವಾಗಿ ಜನರಿಗೆ ತಲುಪಿಸುವ ಅವಕಾಶವಿದೆ. ಅವರ ಸಂಶೋಧನಾ ಕೃತಿಗಳನ್ನು ಕನ್ನಡ ಸೇರಿದಂತೆ ವಿವಿಧ ಭಾಷೆಗಳಿಗೆ ಅನುವಾದಿಸುವುದು ಅಗತ್ಯವಾಗಿದೆ. ಇದು ಜ್ಞಾನವನ್ನು ಜನಸಾಮಾನ್ಯರಿಗೂ ತಲುಪಿಸುವಲ್ಲಿ ಸಹಾಯಕವಾಗುತ್ತದೆ.

ಅಂಬೇಡ್ಕರ್ ಅವರ ಪಿಎಚ್.ಡಿ. ಸಾಧನೆಯ 99 ವರ್ಷಗಳನ್ನು ನಾವು ಸ್ಮರಿಸುವಾಗ, ಅದು ಕೇವಲ ಒಂದು ಇತಿಹಾಸದ ಘಟನೆಯಾಗಿ ಉಳಿಯಬಾರದು. ಅದು ಇಂದಿನ ಮತ್ತು ಭವಿಷ್ಯದ ಪೀಳಿಗೆಗಳಿಗೆ ದಿಕ್ಕು ತೋರಿಸುವ ದೀಪವಾಗಬೇಕು. ಅವರ ಜೀವನವು ನಮಗೆ ಒಂದು ಸ್ಪಷ್ಟ ಸಂದೇಶ ನೀಡುತ್ತದೆ. ಶಿಕ್ಷಣ, ಪರಿಶ್ರಮ ಮತ್ತು ದೃಢನಿಶ್ಚಯದಿಂದ ಯಾವುದೇ ಅಡೆತಡೆಗಳನ್ನು ಜಯಿಸಬಹುದು.

ಕೊನೆಗೆ, ಡಾ.ಬಿ.ಆರ್.ಅಂಬೇಡ್ಕರ್ ಅವರ ಪಿಎಚ್.ಡಿ. ಸಾಧನೆಯ 99ನೇ ವಾರ್ಷಿಕೋತ್ಸವವು ಭಾರತಕ್ಕೆ ಕೇವಲ ಗೌರವ ಮತ್ತು ಹೆಮ್ಮೆ ನೀಡುವುದಲ್ಲ, ಅದು ನಮ್ಮ ಹೊಣೆಗಾರಿಕೆಯನ್ನು ಕೂಡ ನೆನಪಿಸುತ್ತದೆ.

ಸಮಾನತೆ ಮತ್ತು ನ್ಯಾಯವನ್ನು ಸ್ಥಾಪಿಸುವ ಸಮಾಜ ನಿರ್ಮಾಣದಲ್ಲಿ ನಾವು ಎಲ್ಲರೂ ಪಾಲ್ಗೊಳ್ಳಬೇಕೆಂಬ ಕರೆಯನ್ನು ಇದು ನೀಡುತ್ತದೆ. ಅವರ ಬೌದ್ಧಿಕ ಪರಂಪರೆಯನ್ನು ಮುಂದುವರಿಸುವುದು ನಮ್ಮ ಕರ್ತವ್ಯವಾಗಿದೆ.

ಅಂಬೇಡ್ಕರ್ ಅವರ ದಾರಿಯನ್ನು ಅನುಸರಿಸುವುದು ಎಂದರೆ ಕೇವಲ ಅವರನ್ನು ಸ್ಮರಿಸುವುದಲ್ಲ, ಅವರ ಆಲೋಚನೆಗಳನ್ನು ಜೀವನದಲ್ಲಿ ಅನುಸರಿಸುವುದಾಗಿದೆ. ಇದೇ ಅವರ ಪಿಎಚ್.ಡಿ. ಸಾಧನೆಯ ನಿಜವಾದ ಸ್ಮರಣೆ ಮತ್ತು ಗೌರವವಾಗಿದೆ.

**- ಡಾ.ಡಿ.ಸಿ.**ನಂಜುಂಡ

# ವಿಶ್ವ ವೇದಿಕೆಯಲ್ಲಿ ಕನ್ನಡಿಗನ ಯೋಗ ಸಾಧನೆ

## ವಿಯೆಟ್ನಾಂನಲ್ಲಿ ಬಸವರಾಜ ಕೊನ್ನೂರು

ಯೋಗವು ಭಾರತೀಯ ಸಂಸ್ಕೃತಿಯ ಅಮೂಲ್ಯ ಕೊಡುಗೆ. ವಿಶ್ವದಾದ್ಯಂತ ಯೋಗದ ಮಹತ್ವ ಹೆಚ್ಚುತ್ತಿದ್ದು, ಅನೇಕ ಭಾರತೀಯರು ವಿದೇಶಗಳಲ್ಲಿ ಯೋಗದ ಮೂಲಕ ತಮ್ಮದೇ ಆದ ಛಾಪು ಮೂಡಿಸುತ್ತಿದ್ದಾರೆ. ಅಂತಹವರ ಸಾಲಿನಲ್ಲಿ ಕನ್ನಡಿಗ ಬಸವರಾಜ ಕೊನ್ನೂರು ಅವರು ಪ್ರಮುಖರಾಗಿದ್ದಾರೆ.

ಕಳೆದ 16 ವರ್ಷಗಳಿಂದ ವಿಯೆಟ್ನಾಂನ ಕ್ಯಾಲಿಫೋರ್ನಿಯಾ ಫಿಟ್ನೆಸ್ ಯೋಗ ಸೆಂಟರ್‌ನಲ್ಲಿ ಸೇವೆ ಸಲ್ಲಿಸುತ್ತಿರುವ ಬಸವರಾಜ ಕೊನ್ನೂರು ಅವರು, ಪ್ರಸ್ತುತ ಯೋಗ ಮ್ಯಾನೇಜರ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಯೋಗ ತರಬೇತಿ ಮೇಲ್ವಿಚಾರಕರಾಗಿ ತಮ್ಮ ವೃತ್ತಿಜೀವನ ಆರಂಭಿಸಿದ ಅವರು, ತಮ್ಮ ಪರಿಶ್ರಮ, ನಿಷ್ಠೆ ಮತ್ತು ಪ್ರತಿಭೆಯ ಮೂಲಕ ಸಂಸ್ಥೆಯ ಪ್ರಮುಖ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದಾರೆ.

ಯೋಗ ಕ್ಷೇತ್ರದಲ್ಲಿ ಬಸವರಾಜ ಅವರ ಸಾಧನೆ ಗಮನಾರ್ಹವಾಗಿದೆ.




ಥೈಲ್ಯಾಂಡ್, ಮಲೇಶಿಯಾ ಮತ್ತು ಸಿಂಗಾಪುರ್‌ನಲ್ಲಿ ನಡೆದ ಅಂತರರಾಷ್ಟ್ರೀಯ ಯೋಗ ಸ್ಪರ್ಧೆಗಳಲ್ಲಿ ಭಾಗವಹಿಸಿ ಚಿನ್ನದ ಪದಕಗಳನ್ನು ಗೆದ್ದು ದೇಶದ ಕೀರ್ತಿಯನ್ನು ಹೆಚ್ಚಿಸಿದ್ದಾರೆ. ಅಲ್ಲದೆ, ಭಾರತದಲ್ಲಿ ನಡೆದ ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ಯೋಗ ಸ್ಪರ್ಧೆಗಳಲ್ಲಿಯೂ ಹಲವು ಪ್ರಶಸ್ತಿ ಮತ್ತು ಪದಕಗಳನ್ನು ಪಡೆದು ತಮ್ಮ ಸಾಮರ್ಥ್ಯವನ್ನು ಸಾಬೀತು ಪಡಿಸಿದ್ದಾರೆ.

ತಮ್ಮ ವೈಯಕ್ತಿಕ ಸಾಧನೆಗೆ ಮಾತ್ರ ಸೀಮಿತವಾಗದೆ, ಇತರರ ಬದುಕಿನಲ್ಲೂ ಬೆಳಕು ಚೆಲ್ಲುವ ಕಾರ್ಯವನ್ನು ಬಸವರಾಜ ಮಾಡಿದ್ದಾರೆ. ತಮ್ಮ ಊರಿನ 29ಕ್ಕೂ ಹೆಚ್ಚು ಯುವಕರನ್ನು ವಿಯೆಟ್ನಾಂಗೆ ಕರೆತಂದು, ಅವರಿಗೆ ಯೋಗ ತರಬೇತುದಾರರಾಗಿ ಉದ್ಯೋಗಾವಕಾಶ ಕಲ್ಪಿಸಿದ್ದಾರೆ. ಇದರ ಮೂಲಕ ಅನೇಕ ಕುಟುಂಬಗಳ ಆರ್ಥಿಕ ಅಭಿವೃದ್ಧಿಗೆ ಅವರು ಕಾರಣರಾಗಿದ್ದಾರೆ.

ಇದರ ಜೊತೆಗೆ, ಎರಡು ಬಾರಿ ಗಿನ್ನೆಸ್ ವಿಶ್ವ ದಾಖಲೆ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಅಪರೂಪದ ಸಾಧನೆ ಮಾಡಿದ್ದಾರೆ. ಇದು ಅವರ ಯೋಗದ ಮೇಲಿನ ಬದ್ಧತೆ ಮತ್ತು ಸಮರ್ಪಣೆಯನ್ನು ಪ್ರತಿಬಿಂಬಿಸುತ್ತದೆ.

**ಭಾರತ-ವಿಯೆಟ್ನಾಂನಲ್ಲಿ ಯೋಗ ಸ್ವರೂಪ:** ಭಾರತವು ಯೋಗದ ಜನ್ಮಭೂಮಿಯಾಗಿದ್ದು, ಇಲ್ಲಿ ಯೋಗವನ್ನು ಕೇವಲ ವ್ಯಾಯಾಮವಾಗಿ ಮಾತ್ರವಲ್ಲದೆ, ದೈಹಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಬೆಳವಣಿಗೆಯ ಸಮಗ್ರ ಜೀವನಶೈಲಿಯಾಗಿ ಪರಿಗಣಿಸಲಾಗುತ್ತದೆ. ಯೋಗದ ಮೂಲ ತತ್ವಗಳು ಭಾರತೀಯ ಸಂಸ್ಕೃತಿ ಮತ್ತು ಆಧ್ಯಾತ್ಮಿಕ ಪರಂಪರೆಯೊಂದಿಗೆ ಬೆಸೆದುಕೊಂಡಿವೆ.

ಇನ್ನೊಂದೆಡೆ ವಿಯೆಟ್ನಾಂನಲ್ಲಿ ಯೋಗವು ವೇಗವಾಗಿ ಬೆಳೆಯುತ್ತಿರುವ ಆರೋಗ್ಯ ಮತ್ತು ಫಿಟ್ನೆಸ್ ಚಟುವಟಿಕೆಯಾಗಿದೆ. ದೇಹದ ನಮ್ಯತೆ, ಒತ್ತಡ ನಿವಾರಣೆ, ದೈಹಿಕ ಸಾಮರ್ಥ್ಯ ವೃದ್ಧಿ ಮತ್ತು ಉತ್ತಮ ಜೀವನಶೈಲಿಗಾಗಿ ಹೆಚ್ಚಿನವರು ಯೋಗವನ್ನು ಅಳವಡಿಸಿಕೊಳ್ಳುತ್ತಿದ್ದಾರೆ. ಭಾರತದಲ್ಲಿ ಸಾಂಪ್ರದಾಯಿಕ ಯೋಗಕ್ಕೆ ಹೆಚ್ಚಿನ ಮಹತ್ವ ನೀಡಲಾಗುತ್ತಿದ್ದರೆ, ವಿಯೆಟ್ನಾಂನಲ್ಲಿ ಯೋಗವು ಮುಖ್ಯವಾಗಿ ಫಿಟ್ನೆಸ್ ಮತ್ತು ಆರೋಗ್ಯದ ದೃಷ್ಟಿಕೋನದಿಂದ ಜನಪ್ರಿಯವಾಗಿದೆ.



ವಿದೇಶಿ ನೆಲದಲ್ಲಿ ಭಾರತೀಯ ಯೋಗದ ಮಹತ್ವವನ್ನು ಸಾರುತ್ತಾ, ವಿಶ್ವದಾದ್ಯಂತ ಯೋಗದ ಬೆಳವಣಿಗೆಗೆ ತಮ್ಮದೇ ಆದ ಕೊಡುಗೆ ನೀಡುತ್ತಿರುವ ಬಸವರಾಜ ಕೊನ್ನೂರು ಅವರು ಕನ್ನಡಿಗರಿಗೆ ಹೆಮ್ಮೆಯ ವ್ಯಕ್ತಿಯಾಗಿದ್ದಾರೆ. ಅವರ ಸಾಧನೆ ಮತ್ತಷ್ಟು ಯುವಕರಿಗೆ ಸ್ಫೂರ್ತಿಯಾಗಲಿ ಎಂಬುದು ಎಲ್ಲರ ಆಶಯ.

# ನಾಲ್ಕು ಮೊಂಬತ್ತಿಗಳು

ಕಳೆದ ಕೆಲವು ದಿನಗಳ ಹಿಂದೆ ಸಾಮಾಜಿಕ ಜಾಲತಾಣದಲ್ಲಿ ಒಂದು ಆಂಗ್ಲ ಭಾಷೆಯ ಕಿರುಚಿತ್ರವೊಂದನ್ನು ನೋಡಿದೆ. ಅದರಲ್ಲಿ ನಾಲ್ಕು ಮೊಂಬತ್ತಿಗಳು (ಕ್ಯಾಂಡಲ್) ಪರಸ್ಪರ ಮಾತನಾಡಿಕೊಳ್ಳುವಂತೆ ಚಿತ್ರಿಸಲಾಗಿತ್ತು. ಆ ಚಿತ್ರದ ಭಾವನೆಗಳು ನನಗೆ ಇಷ್ಟ ಆದವು. ನಿಮ್ಮ ಜೊತೆ ಹಂಚಿಕೊಳ್ಳೋಣ ಎಂದು ಅದನ್ನು ಕನ್ನಡೀಕರಿಸಿ ಬರಹ ರೂಪದಲ್ಲಿ ಪ್ರಕಟ ಮಾಡಿರುವೆ.

ಒಂದು ಕತ್ತಲಿನ ಕೋಣೆಯಲ್ಲಿ ನಾಲ್ಕು ಮೊಂಬತ್ತಿಗಳನ್ನು ಹಚ್ಚಿ ಇಡಲಾಗಿತ್ತು. ಆ ನಾಲ್ಕೂ ಮೊಂಬತ್ತಿಗಳು ಪ್ರಕಾಶಮಾನವಾಗಿ ಉರಿಯುತ್ತಾ ಇದ್ದುದರಿಂದ ಕೋಣೆಯಲ್ಲಿ ಕತ್ತಲೆಗೆ ಜಾಗವಿರಲಿಲ್ಲ. ಆ ಕೋಣೆಯಲ್ಲಿ ನಾಲ್ಕು ಮೊಂಬತ್ತಿಗಳನ್ನು ಹೊರತು ಪಡಿಸಿ ಬೇರೆ ಯಾರೂ ಇರಲಿಲ್ಲ. ತುಂಬಾ ನಿಶ್ಯಬ್ದವಿತ್ತು. ಆಗ ಒಂದು ಮೊಂಬತ್ತಿ ಉಳಿದ ಮೊಂಬತ್ತಿಗಳ ಬಳಿ ಮಾತನಾಡಲು ಪ್ರಾರಂಭ ಮಾಡಿತು.

ನನ್ನ ಹೆಸರು ಶಾಂತಿ. ಒಂದು ಕಾಲವಿತ್ತು ನನಗೆ ಎಲ್ಲರೂ ಗೌರವ ಕೊಡುತ್ತಿದ್ದರು. ಪರಸ್ಪರ ಶಾಂತಿ ಸಹಬಾಳ್ವೆಯಿಂದ ಬದುಕುತ್ತಿದ್ದರು.


ಈ ಜನರಿಗೆ ಶಾಂತಿಯೇ ಬೇಡವಾಗಿದೆ. ಒಬ್ಬರ ಮೇಲೊಬ್ಬರು ದ್ವೇಷ ಕಾರುತ್ತಾ ಬದುಕುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ನಾನು ಹೆಚ್ಚು ಸಮಯ ಬದುಕುವುದಿಲ್ಲ ಎಂದು ಅನಿಸುತ್ತದೆ ಎನ್ನುತ್ತಾ ಆ ಶಾಂತಿ ಮೊಂಬತ್ತಿ ಆರಿ ಹೋಯಿತು.

ಶಾಂತಿ ಮೊಂಬತ್ತಿಯ ಹತ್ತಿರವೇ ಇದ್ದ ಇನ್ನೊಂದು ಮೊಂಬತ್ತಿ ಬಹಳ ನೋವಿನಿಂದ ಮಾತನಾಡಲು ಪ್ರಾರಂಭ ಮಾಡಿತು.

ನನ್ನ ಹೆಸರು ನಂಬಿಕೆ. ಶಾಂತಿಯ ಹಾಗೆಯೇ ನನ್ನನ್ನು ಒಂದು ಕಾಲದಲ್ಲಿ ಎಲ್ಲರೂ ನಂಬುತ್ತಿದ್ದರು. ಅಪನಂಬಿಕೆಗೆ ಜಾಗವೇ ಇರಲಿಲ್ಲ. ಆದರೆ ಈಗ ಏನಾಗಿದೆ ನೋಡಿ. ಯಾರ ಮೇಲೂ ಜನರಿಗೆ ನಂಬಿಕೆ ಇಲ್ಲ.

ಇಂತಹ ಪರಿಸ್ಥಿತಿಯಲ್ಲಿ ನಾನು ಯಾವ ನಂಬಿಕೆಯಲ್ಲಿ ಬದುಕಲಿ? ಎನ್ನುತ್ತಾ ನಂಬಿಕೆ ಮೊಂಬತ್ತಿಯು ನಂದಿ ಹೋಯಿತು.

ಎರಡೂ ಮೊಂಬತ್ತಿಗಳ ಸಾವನ್ನು ಗಮನಿಸಿದ ಮೂರನೇ ಮೊಂಬತ್ತಿ ಅತೀವ ವೇದನೆಯಿಂದ ತನ್ನ ಮಾತುಗಳನ್ನು ಹೇಳಲು ಶುರು ಮಾಡಿತು.



ನನ್ನ ಹೆಸರು ಪ್ರೀತಿ. ಒಂದು ಕಾಲದಲ್ಲಿ ಪರಸ್ಪರ ಪ್ರೀತಿ ಇಲ್ಲದೆ ಜನರು ಬದುಕುತ್ತಲೇ ಇರಲಿಲ್ಲ. ರೋಮಿಯೋ ಜ್ಯೂಲಿಯಟ್‌ನಿಂದ ಹಿಡಿದು ಇಂದಿನ ಕಾಲದ ಪ್ರೇಮಿಗಳ ದಿನದ ಪ್ರೇಮಿಗಳ ತನಕ ಎಲ್ಲರೂ ನನ್ನ ಪ್ರೀತಿಗಾಗಿ ಬದುಕುತ್ತಿದ್ದರು. ಆದರೆ ಈಗ ದ್ವೇಷಕ್ಕೇ ಮಹತ್ವ ಬಂದಿದೆ. ಪ್ರೀತಿಯನ್ನು ಎಲ್ಲರೂ ನಿರ್ಲಕ್ಷ್ಯ ಮಾಡುತ್ತಿದ್ದಾರೆ. ಬೇರೆಯವರನ್ನು ಪ್ರೀತಿಸುವ ಮಾತೇ ಈಗ ಯಾರೂ ಆಡುತ್ತಿಲ್ಲ. ಇಂತಹ ವಾತಾವರಣದಲ್ಲಿ ನಾನು ಯಾಕಾದರೂ ಬದುಕಬೇಕು? ಎನ್ನುತ್ತಾ ಪ್ರೀತಿಯ ಜ್ವಾಲೆ ನಂದಿ ಹೋಯಿತು.

ಕೊನೆಗೆ ಉಳಿದದ್ದು ಒಂದೇ ಮೊಂಬತ್ತಿ. ಕೋಣೆಯಲ್ಲಿ ಬೆಳಕಿನ ಪ್ರಮಾಣವೂ ಕಡಿಮೆಯಾಗಿತ್ತು. ಆಗ ಒಬ್ಬ ಪುಟ್ಟ ಬಾಲಕ ಆ ಕೋಣೆಯೊಳಗೆ ಪ್ರವೇಶಿಸಿದ. ಉರಿಯುತ್ತಿದ್ದ ಒಂದು ಮೊಂಬತ್ತಿ ಹಾಗೂ ಆರಿ ಹೋದ ಮೂರು ಮೊಂಬತ್ತಿಗಳನ್ನು ನೋಡಿ ಆತನಿಗೆ ತುಂಬಾ ದುಃಖವಾಯಿತು.

ಆತ ಅಳಲು ಪ್ರಾರಂಭಿಸಿದ. ಇನ್ನು ಸ್ವಲ್ಪ ಸಮಯ ಕಳೆದರೆ ನಾಲ್ಕನೇ ಮೊಂಬತ್ತಿಯೂ ಆರಿ ಹೋಗುತ್ತದೆ. ಕೋಣೆಯಲ್ಲಿ ಕತ್ತಲು ತುಂಬಿ ಹೋಗುತ್ತದೆ ಎಂಬ ಕಲ್ಪನೆಯಿಂದಲೇ ಆತ ಹೆದರಿ ಮತ್ತೂ ಜೋರಾಗಿ ಅಳಲಾರಂಭಿಸಿದ.

ಆಗ ನಾಲ್ಕನೇ ಮೊಂಬತ್ತಿ ಹೇಳಿತು.

ಅಳ ಬೇಡ ಮಗು. ಭಯ ಪಡಬೇಡ. ನಾನು ಉರಿಯುತ್ತಿರುವ ತನಕ ನಿನಗೆ ಭಯ ಬೇಡ, ನಾನು ಆರಿ ಹೋಗುವ ಬೆಳಕಲ್ಲ

ಹಾಗಾದರೆ ನೀನು ಯಾರು ಮಗು ಮರು ಪ್ರಶ್ನೆ ಹಾಕಿತು.

ನಾನು ಭರವಸೆ. ನಾನು ಇದ್ದೇನೆ ಎಂಬ ಆಶಾ ಭಾವನೆಯಿಂದ ಪ್ರಪಂಚದಾದ್ಯಂತ ಜನರು ನೆಮ್ಮದಿಯಲ್ಲಿ ಬದುಕುತ್ತಿದ್ದಾರೆ. ಕಷ್ಟದಲ್ಲಿರುವವರೂ ನಾಳೆ ನಮಗೆ ನೆಮ್ಮದಿ, ಸುಖ ಸಿಗುತ್ತದೆ ಎನ್ನುವ ಭರವಸೆಯಲ್ಲಿ ದಿನ ದೂಡುತ್ತಿದ್ದಾರೆ.

ನೀನು ಭರವಸೆ ಕಳೆದುಕೊಳ್ಳಬೇಡ ಮಗೂ.. ಎಂದಿತು ನಾಲ್ಕನೇ ಮೊಂಬತ್ತಿ.

ಆ ಪುಟ್ಟ ಬಾಲಕನಲ್ಲಿ ಭರವಸೆ ಹೊಸ ಹುಮ್ಮಸ್ಸನ್ನು ಮೂಡಿಸಿತು. ಆತ ಸಣ್ಣ ಕಡ್ಡಿಯೊಂದನ್ನು ಬಳಸಿ ಭರವಸೆಯ ಜ್ವಾಲೆಯ ಸಹಾಯದಿಂದ ಆರಿ ಹೋಗಿದ್ದ ಶಾಂತಿ, ನಂಬಿಕೆ, ಪ್ರೀತಿ ಮೊಂಬತ್ತಿಗಳನ್ನು ಮತ್ತೆ ಉರಿಸಿದ. ಮತ್ತೆ ನಾಲ್ಕೂ ಮೊಂಬತ್ತಿಗಳು ಮೊದಲಿನಂತೆಯೇ ಉರಿಯಲಾರಂಭಿಸಿ ಕೋಣೆ ಬೆಳಕಿನಿಂದ ಬೆಳಗಿತು. ಪುಟ್ಟ ಬಾಲಕನ ಮುಖವೂ ನಗುವಿನಿಂದ ಅರಳಿತು.

ಯಾವತ್ತೂ ನೀವು ಭರವಸೆಯನ್ನು ಕಳೆದುಕೊಳ್ಳಬೇಡಿ. ನೀವು ನಾಳಿನ ಉತ್ತಮ ಜೀವನದ ಭರವಸೆಯಿಂದ ಬದುಕಿದರೆ ಪ್ರೀತಿ, ಶಾಂತಿ ಹಾಗೂ ನಂಬಿಕೆಯ ಬದುಕು ನಿಮ್ಮದಾಗುವುದರಲ್ಲಿ ಸಂಶಯವಿಲ್ಲ. ಯಾವತ್ತಿನವರೆಗೆ ಭರವಸೆಯ ದೀಪ ಉರಿಯುತ್ತಿರುವುದೋ ಅಲ್ಲಿಯ ತನಕ ಕತ್ತಲಿಗೆ ಸ್ಥಾನವಿರುವುದಿಲ್ಲ.

**- ಕೆ.ಪಿ.ಅಶ್ವಿನ್** ರಾವ್

# ಕಣ್ಣಿಗೆ ಕಾಣದ ಮನಸ್ಸಿನ ಗಾಯಗಳು

ಜೀವನದಲ್ಲಿ ಕೆಲವು ಗಾಯಗಳು ರಕ್ತ ಹರಿಸುವುದಿಲ್ಲ, ಆದರೆ ಬದುಕಿನುದ್ದಕ್ಕೂ ನೋವನ್ನು ನೀಡುತ್ತವೆ. ಕೆಲವು ನೋವುಗಳು ಕಣ್ಣೀರು ತರಿಸುವುದಿಲ್ಲ, ಆದರೆ ಹೃದಯವನ್ನು ಮೌನವಾಗಿ ಚೂರುಚೂರಾಗಿಸುತ್ತವೆ. ಇಂತಹ ಗಾಯಗಳು ದೇಹದಲ್ಲಲ್ಲ, ಮನಸ್ಸಿನ ಆಳದಲ್ಲಿ ಉಂಟಾಗುತ್ತವೆ. ಅವು ಕಣ್ಣಿಗೆ ಕಾಣುವುದಿಲ್ಲ, ಆದರೆ ಅವುಗಳ ಭಾರವನ್ನು ಹೊತ್ತುಕೊಂಡು ಅನೇಕರು ಪ್ರತಿದಿನ ಬದುಕುತ್ತಿರುತ್ತಾರೆ.

ಪ್ರಪಂಚದಲ್ಲಿ ಅತ್ಯಂತ ನೋವಿನ ಸಂಗತಿ ಎಂದರೆ ಮನಸ್ಸಿಗೆ ಆದ ಕೆಲವು ಗಾಯಗಳನ್ನು ಯಾರ ಬಳಿಯೂ ಹೇಳಿಕೊಳ್ಳಲು ಸಾಧ್ಯವಾಗದಿರುವುದು. ಕೆಲವೊಮ್ಮೆ ನೋವಿಗಿಂತ ಆ ನೋವನ್ನು ಹೇಳಿಕೊಳ್ಳಲಾಗದ ಅಸಹಾಯಕತೆಯೇ ಹೆಚ್ಚು ಕಾಡುತ್ತದೆ. ಎಲ್ಲರೊಂದಿಗೆ ಬೆರೆತು ನಗುವ ವ್ಯಕ್ತಿಯ ಹೃದಯದೊಳಗೆ ಎಷ್ಟು ನೋವು ಅಡಗಿದೆಯೋ ಯಾರಿಗೂ ತಿಳಿಯುವುದಿಲ್ಲ. ಏಕೆಂದರೆ ಅನೇಕ ಗಾಯಗಳು ಮಾತುಗಳ ರೂಪ ಪಡೆಯುವುದೇ ಇಲ್ಲ.

ಕೆಲವು ಮಕ್ಕಳು ಬಾಲ್ಯದಲ್ಲಿ ಅನುಭವಿಸುವ ನಿರ್ಲಕ್ಷ್ಯವನ್ನು ಯಾರ ಬಳಿಯೂ ಹೇಳಿಕೊಳ್ಳುವುದಿಲ್ಲ. ಪೋಷಕರ ಪ್ರೀತಿಗಾಗಿ ಹಂಬಲಿಸಿದ ಹೃದಯಕ್ಕೆ ಸಿಕ್ಕಿದ್ದು ಬೈಗುಳ, ಅವಮಾನ ಅಥವಾ ನಿರಾಸಕ್ತಿ ಮಾತ್ರವಾಗಿರಬಹುದು. ಆ ಮಗು ದೊಡ್ಡವನಾಗುತ್ತದೆ, ಜೀವನದಲ್ಲಿ ಮುಂದೆ ಸಾಗುತ್ತದೆ. ಆದರೆ ಬಾಲ್ಯದಲ್ಲಿ ಕೇಳಿದ ನಿನ್ನಿಂದ ಏನೂ ಆಗುವುದಿಲ್ಲ ಎಂಬ ಒಂದು ವಾಕ್ಯ ಮಾತ್ರ ಅದರ ಮನಸ್ಸಿನಲ್ಲಿ ವರ್ಷಗಳ ಕಾಲ ಪ್ರತಿಧ್ವನಿಸುತ್ತಲೇ ಇರುತ್ತದೆ. ಆ ಗಾಯವನ್ನು ಅದು ಯಾರಿಗೂ ಹೇಳುವುದಿಲ್ಲ. ಆದರೆ ಪ್ರತಿಯೊಂದು ನಿರ್ಧಾರದಲ್ಲೂ, ಪ್ರತಿಯೊಂದು ಕನಸಿನಲ್ಲೂ ಆ ನೋವಿನ ನೆರಳು ಕಾಣಿಸಿಕೊಳ್ಳುತ್ತದೆ.

ಕೆಲವು ಗಾಯಗಳಿಗೆ ಕಾರಣವಾದ ವ್ಯಕ್ತಿಗಳು ತಮ್ಮಿಂದ ಯಾರಿಗಾದರೂ ನೋವಾಗಿದೆ ಎಂಬುದನ್ನೇ ಅರಿತಿರುವುದಿಲ್ಲ. ಅವರು ಹೇಳಿದ ಒಂದು ಮಾತು, ತೋರಿದ ಒಂದು ನಿರ್ಲಕ್ಷ್ಯ, ಮಾಡಿದ ಒಂದು ಅವಮಾನ ಮತ್ತೊಬ್ಬರ ಮನಸ್ಸಿನಲ್ಲಿ ಎಷ್ಟು ಆಳವಾದ ಗಾಯ ಮಾಡಿರಬಹುದು ಎಂಬುದನ್ನು ಅವರು ಊಹಿಸಲೂ ಸಾಧ್ಯವಿಲ್ಲ. ಮಾತಿನಿಂದ ಆದ ಗಾಯಗಳು ಕತ್ತಿಯಿಂದ ಆದ ಗಾಯಗಳಿಗಿಂತ ಹೆಚ್ಚು ಕಾಲ ಉಳಿಯುತ್ತವೆ ಎನ್ನುವುದು ಇದಕ್ಕಾಗಿಯೇ.

ಜೀವನದಲ್ಲಿ ಕೆಲವೊಮ್ಮೆ ನಾವು ಅತಿಯಾಗಿ ನಂಬಿದ ವ್ಯಕ್ತಿಗಳೇ ನಮ್ಮನ್ನು ನೋಯಿಸುತ್ತಾರೆ. ಪ್ರೀತಿಸಿದವರು ದೂರವಾದಾಗ, ಆತ್ಮೀಯ ಸ್ನೇಹಿತ ದ್ರೋಹ ಮಾಡಿದಾಗ, ಕುಟುಂಬದವರು




ಅರ್ಥಮಾಡಿಕೊಳ್ಳದಾಗ ಉಂಟಾಗುವ ನೋವು ವಿಭಿನ್ನವಾಗಿರುತ್ತದೆ. ಅಪರಿಚಿತ ವ್ಯಕ್ತಿಯಿಂದ ಬಂದ ನೋವನ್ನು ಮರೆತರೂ, ಹೃದಯಕ್ಕೆ ಹತ್ತಿರವಾಗಿದ್ದವರಿಂದ ಬಂದ ನೋವನ್ನು ಮರೆತುಬಿಡುವುದು ಅಷ್ಟು ಸುಲಭವಲ್ಲ. ಏಕೆಂದರೆ ಆ ಗಾಯ ಕೇವಲ ಒಂದು ಘಟನೆಯಲ್ಲ; ಅದು ನಂಬಿಕೆಯ ಮುರಿತವಾಗಿದೆ.

ಕೆಲವರು ಪ್ರತಿದಿನ ನಗುತ್ತಿರುತ್ತಾರೆ. ಎಲ್ಲರೊಂದಿಗೆ ಸಂತೋಷದಿಂದ ಮಾತನಾಡುತ್ತಾರೆ. ತಮ್ಮ ಜವಾಬ್ದಾರಿಗಳನ್ನು ನಿರ್ವಹಿಸುತ್ತಾರೆ. ಆದರೆ ರಾತ್ರಿ ಒಬ್ಬರೇ ಇದ್ದಾಗ ಅವರ ಮನಸ್ಸು ಸಾವಿರ ನೋವುಗಳನ್ನು ನೆನಪಿಸಿಕೊಳ್ಳುತ್ತದೆ. ಹಗಲಿನಲ್ಲಿ ಮರೆಮಾಚಿದ ಕಣ್ಣೀರು ರಾತ್ರಿ ಮೌನವಾಗಿ ಹರಿಯುತ್ತದೆ. ಈ ಜಗತ್ತಿನಲ್ಲಿ ಅತ್ಯಂತ ಏಕಾಂತದ ಕ್ಷಣವೆಂದರೆ ತನ್ನ ನೋವನ್ನು ಯಾರಿಗೂ ವಿವರಿಸಲು ಸಾಧ್ಯವಾಗದ ಕ್ಷಣ.

ಕೆಲವು ಗಾಯಗಳಿಗೆ ಹೆಸರುಗಳೇ ಇರುವುದಿಲ್ಲ. ಏನೋ ಒಂದು ಖಾಲಿತನ, ಏನೋ ಒಂದು ಕೊರತೆ, ಏನೋ ಒಂದು ಅರ್ಥವಾಗದ ದುಃಖ ಮನಸ್ಸನ್ನು ಕಾಡುತ್ತಿರುತ್ತದೆ. ಎಲ್ಲವೂ ಇದ್ದರೂ ಏನೋ ಕಳೆದುಹೋದ ಭಾವನೆ ಕಾಡುತ್ತದೆ. ಈ ನೋವಿಗೆ ಕಾರಣವೇನು ಎಂದು ಕೇಳಿದರೂ ಉತ್ತರ ಸಿಗುವುದಿಲ್ಲ. ಆದರೆ ಮನಸ್ಸು ಮಾತ್ರ ನಿರಂತರವಾಗಿ ಭಾರವಾಗಿರುತ್ತದೆ.

ಇಂದಿನ ದಿನಗಳಲ್ಲಿ ಸಾಮಾಜಿಕ ಜಾಲತಾಣಗಳು ಈ ನೋವನ್ನು ಮತ್ತಷ್ಟು ಹೆಚ್ಚಿಸುತ್ತಿವೆ. ಇತರರ ಬದುಕಿನ ಸುಂದರ ಚಿತ್ರಗಳನ್ನು ನೋಡುತ್ತಾ ಅನೇಕರು ತಮ್ಮ ಜೀವನವನ್ನು ಕಡಿಮೆ ಎಂದು ಭಾವಿಸುತ್ತಾರೆ. ಎಲ್ಲರೂ ಸಂತೋಷವಾಗಿದ್ದಾರೆ, ಯಶಸ್ವಿಯಾಗಿದ್ದಾರೆ, ಪ್ರೀತಿಸಲ್ಪಡುತ್ತಿದ್ದಾರೆ ಎಂಬ ಭ್ರಮೆ ಹುಟ್ಟುತ್ತದೆ. ಆಗ ತಮ್ಮ ಜೀವನದ ಕೊರತೆಗಳು ಮಾತ್ರ ಕಣ್ಣಿಗೆ ಕಾಣಲು ಆರಂಭವಾಗುತ್ತವೆ. ಈ ಹೋಲಿಕೆ ನಿಧಾನವಾಗಿ ಮನಸ್ಸಿನೊಳಗೆ ಆತ್ಮವಿಶ್ವಾಸದ ಗಾಯವನ್ನು ಉಂಟುಮಾಡುತ್ತದೆ.

ಮನಸ್ಸಿನ ಗಾಯಗಳ ಮತ್ತೊಂದು ವಿಶೇಷತೆ ಎಂದರೆ ಅವು ಕಾಲದೊಂದಿಗೆ ಅಳಿದುಹೋಗುವುದಿಲ್ಲ. ಕೆಲವೊಮ್ಮೆ ವರ್ಷಗಳ ನಂತರವೂ ಒಂದು ನೆನಪು, ಒಂದು ಹಾಡು, ಒಂದು ಸ್ಥಳ ಅಥವಾ ಒಂದು ವ್ಯಕ್ತಿಯ ಹೆಸರು ಆ ಹಳೆಯ ಗಾಯವನ್ನು ಮತ್ತೆ ಜೀವಂತಗೊಳಿಸುತ್ತದೆ. ಹೊರಗೆ ಎಲ್ಲವೂ ಸರಿಯಾಗಿರುವಂತೆ ಕಂಡರೂ, ಒಳಗೆ ಹಳೆಯ ನೋವು ಮತ್ತೆ ಎಚ್ಚರಗೊಳ್ಳುತ್ತದೆ.

ಅತ್ಯಂತ ನೋವಿನ ಸಂಗತಿ ಏನೆಂದರೆ ಅನೇಕರು ತಮ್ಮ ನೋವನ್ನು ಮರೆಮಾಚಲು ಕಲಿತುಬಿಡುತ್ತಾರೆ.

ನಾನು ಚೆನ್ನಾಗಿದ್ದೇನೆ ಎಂದು ಹೇಳುತ್ತಾರೆ. ಆದರೆ ಅವರ ಮನಸ್ಸು ಮಾತ್ರ ಸಹಾಯಕ್ಕಾಗಿ ಕೂಗುತ್ತಿರುತ್ತದೆ. ಸಮಾಜವು ಕಣ್ಣೀರಿಗೆ ದುರ್ಬಲತೆ ಎಂಬ ಹೆಸರನ್ನು ಕೊಟ್ಟಿರುವುದರಿಂದ ಅನೇಕರು ತಮ್ಮ ಭಾವನೆಗಳನ್ನು ಹತ್ತಿಕ್ಕಿಕೊಳ್ಳುತ್ತಾರೆ. ನಿಧಾನವಾಗಿ ಆ ಭಾವನೆಗಳು ಮನಸ್ಸಿನೊಳಗೆ ಸಂಗ್ರಹವಾಗಿ ದೊಡ್ಡ ಗಾಯಗಳಾಗಿ ರೂಪುಗೊಳ್ಳುತ್ತವೆ.

ಆದರೆ ಪ್ರತಿಯೊಂದು ಗಾಯಕ್ಕೂ ಗುಣಮುಖವಾಗುವ ಶಕ್ತಿ ಇದೆ. ಅದಕ್ಕಾಗಿ ಮೊದಲಿಗೆ ನಾವು ನಮ್ಮ ನೋವನ್ನು ಒಪ್ಪಿಕೊಳ್ಳಬೇಕು. ನೋವಾಗುತ್ತಿದೆ ಎಂಬುದನ್ನು ಒಪ್ಪಿಕೊಳ್ಳುವುದು ದುರ್ಬಲತೆಯಲ್ಲ. ಅದು ಧೈರ್ಯದ ಲಕ್ಷಣ. ಮನಸ್ಸಿನೊಳಗಿನ ನೋವನ್ನು ವಿಶ್ವಾಸಾರ್ಹ ವ್ಯಕ್ತಿಗಳೊಂದಿಗೆ ಹಂಚಿಕೊಳ್ಳುವುದು, ಭಾವನೆಗಳನ್ನು ವ್ಯಕ್ತಪಡಿಸುವುದು ಮತ್ತು ತನ್ನನ್ನು ತಾನೇ ಪ್ರೀತಿಸಲು ಕಲಿಯುವುದು ಗುಣಮುಖವಾಗುವ ಪ್ರಕ್ರಿಯೆಯ ಮೊದಲ ಹೆಜ್ಜೆಗಳಾಗಿವೆ.

ನಾವು ಇತರರ ಜೀವನದಲ್ಲಿ ಹೇಗೆ ವರ್ತಿಸುತ್ತೇವೆ ಎಂಬುದರ ಬಗ್ಗೆ ಎಚ್ಚರಿಕೆಯಿಂದಿರಬೇಕು. ನಮ್ಮ ಒಂದು ಮಾತು ಯಾರದೋ ಮನಸ್ಸಿನಲ್ಲಿ ವರ್ಷಗಳ ಕಾಲ ಉಳಿಯುವ ಗಾಯವಾಗಬಹುದು. ಅದೇ ರೀತಿ ನಮ್ಮ ಒಂದು ಪ್ರೋತ್ಸಾಹದ ಮಾತು, ಒಂದು ಕಾಳಜಿಯ ಸ್ಪರ್ಶ, ಒಂದು ಅರ್ಥಪೂರ್ಣ ನಗು ಯಾರದೋ ಮುರಿದ ಮನಸ್ಸಿಗೆ ಹೊಸ ಜೀವ ತುಂಬಬಹುದು.

ಈ ಜಗತ್ತಿನಲ್ಲಿ ನಾವು ನೋಡುವ ಪ್ರತಿಯೊಂದು ಮುಖದ ಹಿಂದೆ ಒಂದು ಕಥೆ ಇರುತ್ತದೆ. ಕೆಲವು ಕಥೆಗಳು ಸಂತೋಷವಾಗಿರುತ್ತವೆ.

ಕೆಲವು ಕಥೆಗಳು ಹೇಳಲಾಗದ ನೋವಿನವಾಗಿರುತ್ತವೆ. ಆದ್ದರಿಂದ ಜನರನ್ನು ತೀರ್ಪು ಮಾಡುವ ಮೊದಲು ಅವರನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸೋಣ. ಏಕೆಂದರೆ ಅನೇಕ ಬಾರಿ ನಗುತ್ತಿರುವ ವ್ಯಕ್ತಿಯೇ ಅತಿ ಹೆಚ್ಚು ನೋವನ್ನು ಅನುಭವಿಸುತ್ತಿರಬಹುದು.


ದೇಹದ ಗಾಯಗಳಿಗೆ ಔಷಧಿ ಅಂಗಡಿಗಳಲ್ಲಿ ಚಿಕಿತ್ಸೆ ಸಿಗಬಹುದು. ಆದರೆ ಮನಸ್ಸಿನ ಗಾಯಗಳಿಗೆ ಪ್ರೀತಿ, ಕಾಳಜಿ, ಸಹಾನುಭೂತಿ ಮತ್ತು ಅರ್ಥೈಸಿಕೊಳ್ಳುವಿಕೆ ಎಂಬ ಔಷಧಿಗಳೇ ಪರಿಹಾರ. ಕಣ್ಣಿಗೆ ಕಾಣದ ಗಾಯಗಳ ನೋವನ್ನು ಅರಿಯುವ ಹೃದಯಗಳು ಹೆಚ್ಚಾದಾಗ ಮಾತ್ರ ಸಮಾಜ ನಿಜವಾದ ಅರ್ಥದಲ್ಲಿ ಮಾನವೀಯವಾಗುತ್ತದೆ. ಈ ಆವೃತ್ತಿ ಹೆಚ್ಚು ಭಾವನಾತ್ಮಕವಾಗಿ, ಮೌನವಾಗಿ ಸಹಿಸಿಕೊಳ್ಳುವ ಮನಸ್ಸಿನ ಗಾಯಗಳು, ನಿರ್ಲಕ್ಷ್ಯ, ದ್ರೋಹ, ಏಕಾಂತ ಮತ್ತು ಹೇಳಲಾಗದ ನೋವಿನ ಮೇಲೆ ಕೇಂದ್ರೀಕೃತವಾಗಿದೆ.

**- ಶ್ರೀ ಸುಬ್ರಹ್ಮಣ್ಯ** ನಾಯಕ್

# ಎಸ್‌ಐಆರ್ ಯಶಸ್ಸಿಗೆ ಎಲ್ಲರ ಸಹಕಾರ ಅತ್ಯಗತ್ಯ

## ನಿರಾಧಾರ ಆರೋಪಗಳಿಗೆ ಕಿವಿಗೊಡಬೇಡಿ | ಅರಸೀಕೆರೆಯಲ್ಲಿ ಜೆಡಿಎಸ್‌ನಿಂದ ಜಾಗೃತಿ

• ಪ್ರಜೋದಯ ವರದಿ



**ಅರಸೀಕೆರೆ:** ಚುನಾವಣಾ ಆಯೋಗ ವಿಶೇಷ ಮತದಾರರ ಪರಿಷ್ಕರಣೆಯಂತಹ ಗಂಭೀರ ತೀರ್ಮಾನ ಕೈಗೊಂಡಿದ್ದು, ಪ್ರಕ್ರಿಯೆ ಯಶಸ್ಸಿಗೆ ಎಲ್ಲರೂ ಸಹಕಾರ ನೀಡಬೇಕೆಂದು ಜೆಡಿಎಸ್ ಮುಖಂಡ ಎನ್.ಆರ್.ಸಂತೋಷ್ ಅವರು ಸಲಹೆ ನೀಡಿದರು.

ಶ್ರೀನಗರ ಬಡಾವಣೆಯಲ್ಲಿರುವ ಪಕ್ಷದ ಕಚೇರಿಯಲ್ಲಿ ನಡೆದ ಎಸ್‌ಐಆರ್ ಕುರಿತು ಸಭೆಯಲ್ಲಿ ಮಾತನಾಡಿದ ಅವರು, ಚುನಾವಣಾ ಆಯೋಗ ಎರಡು ದಶಕದ ಬಳಿಕ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆಗೆ ಮುಂದಾಗಿರುವುದು ಸ್ವಾಗತಾರ್ಹ. ನೈಜ ಮತದಾರರ ಪತ್ತೆಗೆ ಆಯೋಗ ಪ್ರಕ್ರಿಯೆ ಪ್ರಾಂಭಿಸಿದ್ದು ಹಲವು ರಾಜ್ಯಗಳಲ್ಲಿ ಯಶಸ್ಸು ಕಂಡಿದೆ. ಪಶ್ಚಿಮ ಬಂಗಾಳದಲ್ಲಿ 94 ಲಕ್ಷ ಅನರ್ಹರನ್ನು ಪತ್ತೆ ಮಾಡಿದ್ದು ಐತಿಹಾಸಿಕ ಸಾಧನೆಯಾಗಿದೆ. ವಾಸ್ತವ ಮರೆಮಾಚಲು ಹೊರಟಿರುವ ಕಾಂಗ್ರೆಸ್ ಸಾಂವಿಧಾನಿಕ ಸಂಸ್ಥೆ ವಿರುದ್ಧ ಇಲ್ಲಸಲ್ಲದ ಆರೋಪ ಮಾಡುತ್ತಿರುವುದು ಖಂಡನೀಯ. ಮತದಾರರ ಪಟ್ಟಿಯಲ್ಲಿ ಎರಡು ಕಡೆ ಹೆಸರು ನಮೂದಾಗಿದ್ದಲ್ಲಿ ಒಂದೆಡೆ ಉಳಿಸಿಕೊಳ್ಳಲು ಅವಕಾಶವಿದೆ. ಹೊಸ ಸೇರ್ಪಡೆ, ರದ್ದು, ಬದಲಾವಣೆ ಸೇರಿ ಎಲ್ಲಾ ಪ್ರಕ್ರಿಯೆ ಎಸ್‌ಐಆರ್ ಮೂಲಕ ನಡೆಯಲಿದೆ. ರಾಜಕೀಯ ವಿರೋಧಿಗಳ ಅಪಪ್ರಚಾರಕ್ಕೆ ಯಾರೂ ಕಿವಿಗೊಡಬಾರದು. ಮನೆ ಮನೆಗೆ ತೆರಳಿ ಜಾಗೃತಿ ಮೂಡಿಸುವ ಜೊತೆಗೆ ಕಾಂಗ್ರೆಸ್ ಕುತಂತ್ರಕ್ಕೆ ಜೆಡಿಎಸ್ ಕಾರ್ಯಕರ್ತರು ಹಾಗು ಮುಖಂಡರು ಪ್ರತ್ಯುತ್ತರ ನೀಡಬೇಕೆಂದು ಕರೆ ನೀಡಿದರು.

**ಅನರ್ಹರ ಸೇರ್ಪಡೆಯಿಂದ ಸೋಲು**

ಜೆಡಿಎಸ್ ವಕ್ತಾರ, ಎಸ್‌ಐಆರ್ ಉಸ್ತುವಾರಿ ಪ್ರದೀಪ್ ಕುಮಾರ್ ಅವರು ಮಾತನಾಡಿ, ಪ್ರಜಾಪ್ರಭುತ್ವ ವ್ಯವಸ್ಥೆಯ ಭದ್ರ ಬುನಾದಿಗೆ ಮತದಾನ ಮಾಡುವುದು ಪ್ರತಿಯೊಬ್ಬ ಪ್ರಜೆಯ ಕರ್ತವ್ಯ ಎಂಬುದನ್ನು ಮರೆಯಬಾರದು. ಚುನಾವಣಾ ಆಯೋಗ ಕಾಲ ಕಾಲಕ್ಕೆ ಅಗತ್ಯ ನಿಯಾಮವಳಿ ರೂಪಿಸಿ ಸಕ್ರಿಯ ಪಾಲ್ಗೊಳ್ಳುವಿಕೆಗೆ ಅವಕಾಶ ಮಾಡಿಕೊಟ್ಟಿದೆ. ತಮಿಳುನಾಡು, ಕೇರಳಂ, ಪಶ್ಚಿಮ ಬಂಗಾಳ ಸೇರಿ ಹಲವು ರಾಜ್ಯಗಳಲ್ಲಿ ಎಸ್‌ಐಆರ್ ನಡೆದಿದೆ. ಇದೀಗ ರಾಜ್ಯದಲ್ಲಿ ಆರಂಭಗೊಂಡಿದ್ದು ಜಾಗೃತಿ ಮೂಡಿಸಲು ಸಂಕಲ್ಪ ಮಾಡಬೇಕಿದೆ. ಅನರ್ಹರ ಸೇರ್ಪಡೆ ಕಾರಣಕ್ಕೆ ಕಳೆದ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿ ಎನ್.ಆರ್.ಸಂತೋಷ್ ಕಡಿಮೆ ಅಂತರದಲ್ಲಿ ಸೋಲು ಕಾಣುವಂತಾಯಿತು. ಮತದಾರರ ಪಟ್ಟಿ ತಯಾರಿಸುವ ವೇಳೆ ಹೆಸರು ಕೈ ಬಿಡದಂತೆ ನೋಡಿಕೊಳ್ಳುವ ಜೊತೆಗೆ ಯುವ ಮತದಾರರು ಸೇರ್ಪಡೆಯಾಗಬೇಕು. ಅನರ್ಹರಿಗೆ ಅವಕಾಶ ಇರದಂತೆ ನೋಡಿಕೊಂಡಲ್ಲಿ ಮುಂಬರುವ ವಿಧಾನಸಭಾ ಚುನಾವಣೆ ಯಲ್ಲಿ ಸಂತೋಷ್ ಗೆಲುವು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲವೆಂದರು.

ವಕ್ತಾರ ಮೋಹನ್ ಅವರು ಮಾತನಾಡಿ, ಎನ್‌ಡಿಎ ಶಕ್ತಿ ಬಲಗೊಳಿಸಲು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಹಾಗು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಸಹಕಾರ ನೀಡುತ್ತಿದ್ದಾರೆ. 2028ಕ್ಕೆ ಅಧಿಕಾರದ ಚುಕ್ಕಾಣಿ ಹಿಡಿಯಲು ಮತದಾರರಲ್ಲಿ ಜಾಗೃತಿ ಉಂಟು ಮಾಡುವ ಅಗತ್ಯವಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ಭೋಜಾನಾಯ್ಕ್, ಗಂಡಸಿ, ಬಾಣಾವರ, ಕಣಕಟ್ಟೆ, ಕಸಬಾ ಹಾಗು ನಗರದ ವಿವಿಧ ವಾರ್ಡ್‌ಗಳ ಜೆಡಿಎಸ್ ಕಾರ್ಯಕರ್ತರು, ಮುಖಂಡರು ಪಾಲ್ಗೊಂಡಿದ್ದರು.

### ಹೆಚ್‌ಡಿಕೆ ಮನವಿಗೆ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಸ್ಪಂದನೆ

# ಮಾವು ಬೆಳೆಗಾರರ ಸಂಕಷ್ಟಕ್ಕೆ ಕೇಂದ್ರ ನೆರವು

• ಪ್ರಜೋದಯ ವರದಿ



**ಬೆಂಗಳೂರು:** ಹವಾಮಾನ ವೈಪರೀತ್ಯ ಹಾಗು ಬೆಲೆ ಕುಸಿತದಿಂದ ಸಂಕಷ್ಟಕ್ಕೆ ಗುರಿಯಾಗಿರುವ ರಾಜ್ಯದ ಮಾವು ಬೆಳೆಗಾರರ ನೆರವಿಗೆ ಧಾವಿಸುವುದಾಗಿ ಕೇಂದ್ರದ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರು ಭರವಸೆ ನೀಡಿದರು.

ನವದೆಹಲಿಯಲ್ಲಿ ಬುಧವಾರ ಸಂಜೆ ಚೌಹಾಣ್ ಅವರ ನಿವಾಸಕ್ಕೆ ತೆರಳಿ ಮಾವು ಬೆಳೆಗಾರರ ಸಂಕಷ್ಟದ ಬಗ್ಗೆ ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಚರ್ಚೆ ನಡೆಸಿದರು. ಕುಮಾರಸ್ವಾಮಿ ಅವರ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ ಚೌಹಾಣ್ ಅವರು, ತಕ್ಷಣವೇ ಮಾವು ಬೆಳೆಗಾರರಿಗೆ ಅನುಕೂಲವಾಗುವ ನಿರ್ಧಾರ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಪ್ರಸಕ್ತ ಹಂಗಾಮಿನಲ್ಲಿ ರೈತರು ಎದುರಿಸುತ್ತಿರುವ ಬೆಲೆ ಕುಸಿತ ಸಂಕಷ್ಟವನ್ನು ತಗ್ಗಿಸಲು ಮಾರುಕಟ್ಟೆ ಮಧ್ಯಸ್ಥಿಕೆ ಯೋಜನೆ ಮೂಲಕ ನೆರವಾಗಬೇಕು ಹಾಗು ಬೆಲೆ ಕೊರತೆ ಪಾವತಿ ಯೋಜನೆ ಅಡಿಯಲ್ಲಿ ಬೆಂಬಲ ಬೆಲೆ ನೀಡಬೇಕು. ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ಬೆಂಗಳೂರು ಗ್ರಾಮಾಂತರ, ತುಮಕೂರು, ಹಾವೇರಿ ಸೇರಿ ರಾಜ್ಯದ ನಾನಾ ಜಿಲ್ಲೆಗಳಲ್ಲಿ ಮಾವು ಬೆಳೆ ಗಾರರು ಎದುರಿಸುತ್ತಿರುವ ಸಂಕಷ್ಟದ ಬಗ್ಗೆ ಕುಮಾರಸ್ವಾಮಿ ಅವರು ಕೃಷಿ ಸಚಿವರಿಗೆ ವಿವರಿಸಿದರು.

ನಿರಂತರ ಬೆಲೆ ಕುಸಿತ ಮತ್ತು ಹೆಚ್ಚಾಗುತ್ತಿರುವ ಕೃಷಿ ವೆಚ್ಚಗಳಿಂದಾಗಿ ಮಾವು ಬೆಳೆಗಾರರು ಈ ವರ್ಷವೂ ಸಂಕಷ್ಟಕ್ಕೆ ತುತ್ತಾಗಿದ್ದಾರೆ. ರೈತರು ಮತ್ತು ತೋಟಗಾರಿಕೆ ಕ್ಷೇತ್ರವನ್ನು ರಕ್ಷಿಸುವ ಉದ್ದೇಶದಿಂದ ತಾವು ಈ ಬಗ್ಗೆ ಸಹಾನುಭೂತಿಯಿಂದ ಪರಿಶೀಲಿಸಿ ನಿರ್ಧಾರ ಕೈಗೊಳ್ಳಬೇಕು. ಮಾವು ಬೆಳೆಗಾರರ ಸಮಸ್ಯೆಗಳ ಬಗ್ಗೆ ಹಾಗು ಬೆಲೆಕುಸಿತದ ಕುರಿತಂತೆ ತಾವು ಬರೆದಿರುವ ಪತ್ರವನ್ನು ಈಗಾಗಲೇ ಗಮನಿಸಿದ್ದೇನೆಂದು ಕೈಗಾರಿಕೆ ಸಚಿವರಿಗೆ ತಿಳಿಸಿದ ಕೃಷಿ ಸಚಿವರು, ರೈತರ ನೆರವಿಗೆ ಧಾವಿಸುವ ನಿರ್ಧಾರವನ್ನು ತ್ವರಿತವಾಗಿ ಕೈಗೊಳ್ಳುವುದಾಗಿ ಹೇಳಿದರು.

**ಬೆಂಬಲ ಬೆಲೆ ಘೋಷಣೆ ಭರವಸೆ**

ಕೃಷಿ ಸಚಿವರ ಸಕಾರಾತ್ಮಕ ಸ್ಪಂದನೆಯಿಂದ ಸಂತೋಷವಾಗಿದೆ. ಅತ್ಯಂತ ತ್ವರಿತವಾಗಿ ರೈತರ ಪರವಾಗಿ ನಿರ್ಧಾರ ಕೈಗೊಳ್ಳುವುದಾಗಿ ಹಾಗು ಬೆಂಬಲ ಬೆಲೆ ಘೋಷಣೆ ಮಾಡುವುದಾಗಿ ಭರವಸೆ ನೀಡಿದ್ದು ಸ್ವಾಗತಾರ್ಹ. ಕಳೆದ ವರ್ಷವೂ ಕೃಷಿ ಸಚಿವರು ಸಹನುಭೂತಿಯಿಂದ ಮಾವು ಬೆಳೆಗಾರರ ಸಂಕಷ್ಟಕ್ಕೆ ಸ್ಪಂದಿಸಿದ್ದರು. ಪ್ರಧಾನಿ ನರೇಂದ್ರ ಮೋದಿ ಅವರ ದೂರದೃಷ್ಟಿಯ ನಾಯಕತ್ವದಲ್ಲಿ ರೈತರನ್ನು ಬೆಲೆ ಕುಸಿತ ಹಾಗು ಹವಾಮಾನ ವೈಪರೀತ್ಯದಂತಹ ಸಂಕಷ್ಟಗಳಿಂದ ಪಾರು ಮಾಡಲು ಕೇಂದ್ರ ಸರ್ಕಾರವು ಅವಿರತವಾಗಿ ಶ್ರಮಿಸುತ್ತಿದೆಂದು ಹೆಚ್.ಡಿ. ಕುಮಾರಸ್ವಾಮಿ ಅವರು ಹೇಳಿದರು.

ಕರ್ನಾಟಕವು ಅತಿಹೆಚ್ಚು ಮಾವು ಬೆಳೆಯುವ ಪ್ರಮುಖ ರಾಜ್ಯಗಳಲ್ಲಿ ಒಂದಾಗಿದೆ. ರಾಜ್ಯದಲ್ಲಿ ಸುಮಾರು 1.45 ಲಕ್ಷ ಹೆಕ್ಟೇರ್‌ಗಳಲ್ಲಿ ಮಾವು ಕೃಷಿ ಮಾಡಲಾಗುತ್ತಿದ್ದು, ಪ್ರಸಕ್ತ ಋತುವಿನಲ್ಲಿ ಸುಮಾರು 10 ಲಕ್ಷ ಮೆಟ್ರಿಕ್ ಟನ್ ಮಾವು ಬೆಳೆಯಲಾಗಿದೆ. ಆದರೆ, ಬೆಲೆ ಕುಸಿತ ಹಾಗೂ ಪ್ರತಿಕೂಲಕರ ಹವಾಮಾನದಿಂದ ರೈತರು ಸಂಕಷ್ಟಕ್ಕೆ ತುತ್ತಾಗಿದ್ದಾರೆ ಎಂದು ಸಚಿವರು ಕೃಷಿ ಸಚಿವರ ಗಮನ ಸೆಳೆದರು.

## ಅಜ್ಞಾನ-ಬಡತನ ನಿರ್ಮೂಲನೆಗೆ ಶಿಕ್ಷಣವೊಂದೇ ಅಸ್ತ್ರ

» ಮೊದಲನೇ ಪುಟದಿಂದ

ಓದು ಹಾಗು ಬರೆಯುವುದನ್ನು ಕಲಿತರೆ ಎಲ್ಲವೂ ಮುಗಿಯುವುದಿಲ್ಲ. ಜೀವನ ಆರಂಭವಾಗುವುದು ಅಲ್ಲಿಂದ ಎಂಬ ಅರಿವು ಇರಬೇಕು. ಓದಿ ವಿದ್ಯಾವಂತರಾಗಿ ದುಡಿಮೆಯೊಂದಿಗೆ ಉತ್ತಮ ಬದುಕು ಕಟ್ಟಿಕೊಳ್ಳಬೇಕು. ನಂತರ ತಾನು ಹುಟ್ಟಿ ಬೆಳೆದ ಊರಿನ ಬಗ್ಗೆಯೂ ಚಿಂತನೆ ಮಾಡಬೇಕು. ಎಲ್ಲರನ್ನೂ ಒಗ್ಗೂಡಿಸಿ ಊರಿನ ಅಭಿವೃದ್ಧಿಗೆ ಶ್ರಮಿಸಬೇಕು. ಶೈಕ್ಷಣಿಕ ಹಂತದಿಂದಲೇ ಸಮಾಜಮುಖಿ ಚಿಂತನೆ ಬೆಳೆಸಿಕೊಳ್ಳಬೇಕೆಂದು ತಿಳಿಸಿದರು.

ಹಣ ಕಟ್ಟಿ ಶಾಲೆಗೆ ಮಕ್ಕಳನ್ನು ಸೇರಿಸಿದರೆ ಜವಾಬ್ದಾರಿ ಮುಗಿಯಿತು ಎಂದುಕೊಳ್ಳುವ ಅದೆಷ್ಟೋ ಪಾಲಕರಿದ್ದಾರೆ. ಅದು ತಪ್ಪು ಕಲ್ಪನೆ. ಮಕ್ಕಳ ಶೈಕ್ಷಣಿಕ ವ್ಯವಸ್ಥೆ ಮೇಲೆ ಕಣ್ಣಾಡಿಸಬೇಕು. ತಾವು ಮಕ್ಕಳೊಂದಿಗೆ ಕುಳಿತು ಮಕ್ಕಳ ಮನಸ್ಸಿನಲ್ಲಿ ಏನಿದೆ ಎಂಬುದನ್ನು ಅರಿತು ಅದಕ್ಕೆ ತಕ್ಕಂತೆ ಆದ್ಯತೆ ನೀಡಬೇಕು. ಯಶಸ್ಸಿನ ಶಿಖರವನ್ನು ಏರುವವರೆಗೂ ಬೆಂಗಾವಲಾಗಿ ನಿಲ್ಲಬೇಕು. ಮಕ್ಕಳು ಸಾಧನೆಯ ಗುರಿ ಮುಟ್ಟಿದ ಕ್ಷಣವೇ ಹೆತ್ತವರ ಬದುಕು ಸಾರ್ಥಕವಾಗುತ್ತದೆ. ಶ್ರಮ ಫಲಿಸಿದಂತಾಗಲಿದೆ. ಆದ್ದರಿಂದ ಪಾಲಕರು ತಮ್ಮ ಮಕ್ಕಳ ಹಿಂದೆ ನಿಲ್ಲಬೇಕೆಂದು ಸಲಹೆ ನೀಡಿದರು.

ಯಾರ್‍ಯಾರು ತಮ್ಮ ಪಾಲಕರೊಂದಿಗೆ ಆಂಗ್ಲ ಭಾಷೆಯಲ್ಲಿ ಮಾತನಾಡುತ್ತೀರಿ ಎಂದು ವಿದ್ಯಾರ್ಥಿಗಳಿಗೆ ಪ್ರಶ್ನಿಸಿದ ಚುಂಚಶ್ರೀ, ಮನೆಯಲ್ಲಿ ಸದಾ ಮಾತೃಭಾಷೆ ಕನ್ನಡ ಪ್ರಚಲಿತದಲ್ಲಿರಲಿ. ಆದರೆ ವ್ಯಾಪಾರ, ವ್ಯವಹಾರ ಹಾಗು ಶೈಕ್ಷಣಿಕ ವ್ಯವಸ್ಥೆಯ ಪ್ರಗತಿ ಸಲುವಾಗಿ ಆಂಗ್ಲ ಭಾಷೆ ಕಲಿಕೆ ಇರಲಿ. ಜೊತೆಗೆ ಪಾಲಕರಿಗೆ ಆಂಗ್ಲ ಭಾಷೆ ತಿಳಿದಿದ್ದರೆ ತಮ್ಮ ಮಕ್ಕಳ ಶೈಕ್ಷಣಿಕ ವಿಚಾರಗಳಿಗೆ ಸಹಕಾರಿಯಾಗಲಿದೆ ಎಂದರು.

ಚುಂಚಶ್ರೀಗಳು ವಿದ್ಯಾರ್ಥಿಗಳ ಮಧ್ಯೆ ನಿಂತು ಓಂಕಾರ ಹಾಗೂ ಕೆಲ ಶ್ಲೋಕಗಳನ್ನು ಹೇಳಿಕೊಟ್ಟರು. ಆದಿಚುಂಚನಗಿರಿ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ, ಕಬ್ಬಳಿ ಶಾಖಾ ಮಠದ ಶ್ರೀ ಶಿವಪುತ್ರನಾಥ ಸ್ವಾಮೀಜಿ, ಶಾಸಕ ಸಿ.ಎನ್.ಬಾಲಕೃಷ್ಣ, ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ.ಗೋಪಾಲಸ್ವಾಮಿ, ಸಾಹಿತಿ ತಮ್ಮಣ್ಣಗೌಡ, ಮುಖ್ಯ ಶಿಕ್ಷಕ ಟಿ.ತಿಮ್ಮೇಗೌಡ, ಶಿಕ್ಷಕ ವೃಂದ ಇತರರಿದ್ದರು.

# ದಿಡಗ ಬಸ್ ನಿಲ್ದಾಣದಲ್ಲಿ ನೆಲಹಾಸು-ಶೆಲ್ಟರ್‌ಗೆ ಕ್ರಮ

• ಪ್ರಜೋದಯ ವರದಿ



**ಚನ್ನರಾಯಪಟ್ಟಣ:** ಸಾರ್ವಜನಿಕರ ಬಹುದಿನಗಳ ಬೇಡಿಕೆಯಾಗಿದ್ದ ದಿಡಗ ಗ್ರಾಮದ ಬಸ್ ನಿಲ್ದಾಣಕ್ಕೆ ನೆಲ ಹಾಸು ನಿರ್ಮಾಣಕ್ಕೆ ಕ್ರಮ ಕೈಗೊಂಡಿದ್ದು ಗುಣಮಟ್ಟದ ಕಾಮ ಗಾರಿ ಕೈಗೊಳ್ಳುವಂತೆ ಗುತ್ತಿಗೆದಾರರಿಗೆ ಸೂಚಿಸಲಾಗಿದೆ ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಅವರು ಹೇಳಿದರು.

ತಾಲ್ಲೂಕಿನ ದಿಡಗ ಗ್ರಾಮದಲ್ಲಿ ನಿರ್ಮಿತಿ ಕೇಂದ್ರದಡಿ 21 ಲಕ್ಷ ರೂ. ವೆಚ್ಚದ ಬಸ್ ನಿಲ್ದಾಣಕ್ಕೆ ಕಾಂಕ್ರಿಟ್ ನೆಲಹಾಸು ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ದಿಡಗ ಗ್ರಾಮ ತಾಲ್ಲೂಕಿನ ಗಡಿ ಭಾಗದಲ್ಲಿದ್ದು ತಿಪಟೂರು, ತುರುವೇಕೆರೆ ಹಾಗು ನಾಗಮಂಗಲ ತಾಲ್ಲೂಕು ಕೇಂದ್ರಗಳಿಗೆ ಸಂಪರ್ಕ ಕಲ್ಪಿಸಲಿದೆ. ಊಟಿ, ಬೆಂಗಳೂರು ಹಾಗು ಮೈಸೂರು ನಗರಗಳಿಗೂ ಪ್ರತಿದಿನ ಇಲ್ಲಿಂದ ಸಾರಿಗೆ ಬಸ್ಸುಗಳ ಸಂಚಾರದ ವ್ಯವಸ್ಥೆ ಇರು ವುದರಿಂದ ಇಲ್ಲಿನ ಬಸ್ ನಿಲ್ದಾಣದಲ್ಲಿ ಪ್ರತಿ ರಾತ್ರಿ 10 ಸಾರಿಗೆ ಬಸ್ ನಿಲುಗಡೆಯಾಗಲಿವೆ. ಆದ್ದರಿಂದ ಹೆಚ್ಚಿನ ಅಭಿವೃದ್ಧಿಗೆ ಆದ್ಯತೆ ನೀಡಲಾಗುವುದೆಂದು ತಿಳಿಸಿದರು.

ಬಸ್ ನಿಲ್ದಾಣಕ್ಕೆ ಕಾಂಕ್ರಿಟ್ ನೆಲ ಹಾಸಿನ ಜೊತೆಗೆ ಶೆಲ್ಟರ್ ನಿರ್ಮಾಣ ಮಾಡಲಾಗುವುದು. ಸರ್ಕಾರದಿಂದ ನಿರೀಕ್ಷೆಯಂತೆ ಅನುದಾನ ಸಿಗುತ್ತಿಲ್ಲ. ತಾಲ್ಲೂಕಿನ ಸರ್ವತೋಮುಖ ಅಭಿವೃದ್ಧಿಗೆ ಸಾಕಷ್ಟು ಅನುದಾನ ಬೇಕಿದೆ. ಇಲ್ಲಿನ ಪಶು ಆಸ್ಪತ್ರೆಯ ವೈದ್ಯರ ನೇಮಕಾತಿಗೆ ಗಮನ ಹರಿಸಲಾಗುವುದು ಎಂದರು.

ಕೃಷಿ ಹಾಗು ಇನ್ನಿತರ ಚಟುವಟಿಕೆಗಳಲ್ಲಿ ತಂತ್ರಜ್ಞಾನದ ಬಳಕೆಯ ಪರಿಣಾಮ ಪರಿಶ್ರಮ ವಿಲ್ಲದ ಜೀವನವು ಮನುಷ್ಯನನ್ನು ಅನಾರೋಗ್ಯದ ಕೂಪಕ್ಕೆ ತಳ್ಳುತ್ತಿದೆ. ತಾಲ್ಲೂಕಿನ ಎಲ್ಲಾ ಆರೋಗ್ಯ ಕೇಂದ್ರಗಳ ಅಭಿವೃದ್ಧಿಗೆ ಆದ್ಯತೆ ನೀಡಲಾಗುತ್ತಿದೆ ಎಂದರು.

ಹೋಬಳಿ ಕೇಂದ್ರ ಹಿರೀಸಾವೆ ಸಮುದಾಯ ಆರೋಗ್ಯ ಕೇಂದ್ರದ ಅಭಿವೃದ್ಧಿಗೆ 1 ಕೋಟಿ ರೂ. ಅಗತ್ಯವಿದ್ದು ಸರ್ಕಾರದ ಗಮನ ಸೆಳೆಯಲಾಗಿದೆ. ಶ್ರವಣಬೆಳಗೊಳ ಆರೋಗ್ಯ ಕೇಂದ್ರದ ಶವಾಗಾರ ಕೊಠಡಿ ನಿರ್ಮಾಣ ಕಾರ್ಯಕ್ಕೆ ಅಗತ್ಯ ಹಣ ಕಲ್ಪಿಸುವಂತೆ ಮನವಿ ಮಾಡಲಾಗಿದೆ. ದಿಡಗ ಆರೋಗ್ಯ ಕೇಂದ್ರಕ್ಕೆ ಅಗತ್ಯದ ಮೇರೆಗೆ ತೋಟಿ ಆರೋಗ್ಯ ಕೇಂದ್ರದ ವೈದ್ಯರನ್ನು ವಾರದಲ್ಲಿ ಎರಡು ದಿನ ಭೇಟಿ ನೀಡುವ ವ್ಯವಸ್ಥೆ ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಮತ್ತೋರ್ವ ಖಾಯಂ ವೈದ್ಯರ ನೇಮಕಾತಿಗೆ ಆದ್ಯತೆ ನೀಡಲಾಗುವುದೆಂದು ಭರವಸೆ ನೀಡಿದರು.

ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಹೆಚ್.ಕೆ.ಯೋಗೇಶ್ ಅವರು ಮಾತನಾಡಿ, ಶಾಸಕ ಸಿ.ಎನ್. ಬಾಲಕೃಷ್ಣ ಅವರ ಸಹಕಾರ ಹಾಗು ಮಾರ್ಗದರ್ಶನದಲ್ಲಿ ಕಳೆದ ನಮ್ಮ ಅವಧಿಯಲ್ಲಿ ಸಂಘಕ್ಕೆ ಹೈಟೆಕ್ ಮಾದರಿಯ ಹೊಸ ಕಟ್ಟಡ ನಿರ್ಮಿಸಲಾಗಿದೆ. ಕೇವಲ 10 ಗುಂಟೆ ಜಮೀನು ಹೊಂದಿರುವ ರೈತರಿಗೂ ಸೇರಿ 15 ಕೋಟಿ ರೂ. ಗೂ ಹೆಚ್ಚು ಸಾಲದ ಸೌಲಭ್ಯ ಕಲ್ಪಿಸಲಾಗಿದೆ ಎಂದರು.

ಸ್ಥಳೀಯ ಜನತೆಗೆ ಅನುಕೂಲವಾಗುವ ನಿಟ್ಟಿನಲ್ಲಿ ಶಾಸಕರು ಕಳೆದ ವರ್ಷ ಎಟಿಎಂ ಕಲ್ಪಿಸಿ ದ್ದಾರೆ. ಮುಂದಿನ ದಿನಗಳಲ್ಲಿ ಡಿಸಿಸಿ ಬ್ಯಾಂಕ್ ತರಲು ಯೋಜನೆ ರೂಪಿಸುವಂತೆ ಈಗಾಗಲೇ ಮನವಿ ಮಾಡಲಾಗಿದೆ. ಗಮನ ಹರಿಸುವುದಾಗಿ ಶಾಸಕರು ಭರವಸೆ ನೀಡಿದ್ದಾರೆಂದು ತಿಳಿಸಿದರು.

ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ಎಂ.ಆರ್.ವಾಸು, ಎಪಿಎಂಸಿ ಮಾಜಿ ಅಧ್ಯಕ್ಷ ಉಗೇನಹಳ್ಳಿ ರಘುರಾಂ, ಕೃಷಿ ಪತ್ತಿನ ಸಹಕಾರ ಸಂಘದ ಮಾಜಿ ಅಧ್ಯಕ್ಷರಾದ ಎಸ್. ಕುಮಾರ್, ಸಂಪತ್ ಕುಮಾರ್, ತಾತೇಗೌಡ, ಉಪಾಧ್ಯಕ್ಷ ಮಹೇಶ್, ಮಾಜಿ ಉಪಾಧ್ಯಕ್ಷ ಕುಮಾರ್, ನಿರ್ದೇಶಕರಾದ ಬಾಲು, ಟಿ.ಎಸ್. ಮಧು, ಪ್ರಮುಖರಾದ ಗವೀಶ್, ಆನಂದ್, ನಿಂಗೇಗೌಡ ಮತ್ತಿತರರಿದ್ದರು.

## ಹೊನ್ನೇನಹಳ್ಳಿಯ 2 ಮನೆಯಲ್ಲಿ ಕಳ್ಳತನ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತಾಲ್ಲೂಕಿನ ಹಿರೀಸಾವೆ ಪೊಲೀಸ್ ಠಾಣೆ ವ್ಯಾಪ್ತಿಯ ಎಂ.ಹೊನ್ನೇನಹಳ್ಳಿ ಗ್ರಾಮದಲ್ಲಿ ನಡೆದ ಪ್ರತ್ಯೇಕ ಪ್ರಕರಣಗಳಲ್ಲಿ ನಗದು ಸೇರಿ 2.16 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳುವಾಗಿರುವ ಘಟನೆ ನಡೆದಿದೆ.

ಗ್ರಾಮದ ಚಂದ್ರಮ್ಮ ಎಂಬುವವರ ಮನೆಗೆ ಜೂ.22ರ ರಾತ್ರಿ ಹಿಂಬಾಗಿಲು ಮುರಿದು ಪ್ರವೇಶಿಸಿರುವ ಕಳ್ಳರು ದಿವಾನ್ ಕಾಟ್‌ನಲ್ಲಿಟ್ಟಿದ್ದ 12 ಗ್ರಾಂ ತೂಕದ ಚಿನ್ನದ ಸರ, 8 ಗ್ರಾಂ ತೂಕದ ಚಿನ್ನದ ಹ್ಯಾಂಗಿಂಗ್ಸ್, 5 ಗ್ರಾಂ ತೂಕದ ಒಂದು ಚಿನ್ನದ ಉಂಗುರ, 30 ಗ್ರಾಂ ತೂಕದ ಬೆಳ್ಳಿಯ ಎರಡು ಬಟ್ಟಲು ಮತ್ತು 14,500 ರೂ. ನಗದು ಅಪಹರಿಸಿದ್ದಾರೆ.

ಅದೇ ದಿನ ಜಯಮ್ಮ ಎಂಬುವವರ ಮನೆಗೆ ನುಗ್ಗಿರುವ ಕಳ್ಳರು ಬೀರುವಿನಲ್ಲಿಟ್ಟಿದ್ದ 10 ಗ್ರಾಂ ತೂಕದ ಚಿನ್ನದ ಚೈನ್, 3 ಗ್ರಾಂನ ಚಿನ್ನದ ಉಂಗುರ, 5 ಗ್ರಾಂ ತೂಕದ ಚಿನ್ನದ ಮಾಟಿ, 3 ಗ್ರಾಂನ ಚಿನ್ನದ ಓಲೆ, ಬೆಳ್ಳಿ ಬಟ್ಟಲು ಮತ್ತು ಬೆಳ್ಳಿ ದೀಪ ಹಾಗು 30 ಸಾವಿರ ರೂ. ನಗದು ಕದ್ದಿದ್ದಾರೆ. ಹಿರೀಸಾವೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಅಪರಿಚಿತ ವಾಹನ ಡಿಕ್ಕಿ: ವೃದ್ಧೆ ಸಾವು

• ಪ್ರಜೋದಯ ವರದಿ

**ಅರಸೀಕೆರೆ:** ಅಪರಿಚಿತ ವಾಹನ ಡಿಕ್ಕಿಯಾಗಿ ವೃದ್ಧೆ ಮೃತಪಟ್ಟಿರುವ ಘಟನೆ ತಾಲ್ಲೂಕಿನ ವೆಂಕಟಾಪುರ ಕಾವಲು ಸಮೀಪ ನಡೆದಿದೆ.

ಮುದುಡಿ ಗ್ರಾಮದ ಲಕ್ಷ್ಮಮ್ಮ (88) ಮೃತರು. ಕಳೆದ ಸೋಮವಾರ ಮಧ್ಯಾಹ್ನ ಜಮೀನಿಗೆ ಹೋಗಿ ಬರುತ್ತೇನೆಂದು ಹೋಗಿದ್ದ ವೃದ್ಧೆ ಸಂಜೆ 7.30ರ ಸಮಯದಲ್ಲಿ ಅರಸೀಕೆರೆ – ಮೈಸೂರು ರಸ್ತೆಯ ಎತ್ತಿನಹೊಳೆ ಸೇತುವೆ ಬಳಿ ಕಾಲ್ನಡಿಗೆಯಲ್ಲಿ ಬರುತ್ತಿದ್ದಾಗ ಅಪರಿಚಿತ ವಾಹನ ಡಿಕ್ಕಿಯಾಗಿದೆ. ಗಂಭೀರ ಗಾಯಗೊಂಡಿದ್ದ ಅವರನ್ನು ಹಿಮ್ಸ್‌ಗೆ ದಾಖಲಿಸಲಾಗಿತ್ತಾದರೂ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ. ಗಂಡಸಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಜೂ.28ಕ್ಕೆ ಹಾಸನದಲ್ಲಿ ಪ್ರಥಮ ಚುಟುಕು ಸಾಹಿತ್ಯ ಸಮ್ಮೇಳನ

• ಪ್ರಜೋದಯ ವರದಿ




**ಹಾಸನ:** ನಗರದ ಎ.ವಿ.ಕಾಂತಮ್ಮ ಮಹಿಳಾ ಕಾಲೇಜಿನ ಹಾರನಹಳ್ಳಿ ರಾಮಸ್ವಾಮಿ ಸುಶೀಲಮ್ಮ ಸಭಾಂಗಣದಲ್ಲಿ ಜೂ.28ರಂದು ಜಿಲ್ಲಾ ಪ್ರಥಮ ಚುಟುಕು ಸಾಹಿತ್ಯ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ ಎಂದು ಚುಟುಕು ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಬಾ.ನಂ. ಲೋಕೇಶ್ ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ವೈಶಿಷ್ಟ್ಯತೆ ಹೊಂದಿರುವ ಚುಟುಕು ಸಾಹಿತ್ಯವನ್ನು ಮತ್ತಷ್ಟು ಜನಪ್ರಿಯಗೊಳಿಸುವ ಹಾಗು ಹೊಸ ತಲೆಮಾರಿನ ಬರಹಗಾರರಿಗೆ ಪ್ರೋತ್ಸಾಹಿಸುವ ಉದ್ದೇಶದಿಂದ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ. ಡಾ.ರತ್ನಹಾಲಪ್ಪಗೌಡ ಅವರು ಸರ್ವಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ ಎಂದರು.

ಶ್ರೀರಂಗ ಪಟ್ಟಣದ ಡಾ.ಶ್ರೀ ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸಲಿದ್ದು, ಮಾಜಿ ಸಚಿವರಾದ ಲೀಲಾದೇವಿ ಆರ್. ಪ್ರಸಾದ್ ಉದ್ಘಾಟನೆ ನೆರವೇರಿಸಲಿದ್ದಾರೆ. ಶಾಸಕ ಹೆಚ್.ಪಿ.ಸ್ವರೂಪ್ ಅಧ್ಯಕ್ಷತೆ ವಹಿಸಲಿದ್ದು, ಸಂಸದ ಶ್ರೇಯಸ್ ಎಂ.ಪಟೇಲ್ ಹಾಗು ಇತರರು ಪಾಲ್ಗೊಳ್ಳಲಿದ್ದಾರೆಂದರು.

ಸಮ್ಮೇಳನ ಸಂಚಾಲಕ ರವಿ ನಾಕಲಗೂಡು ಅವರು ಮಾತನಾಡಿ, ಭಾನುವಾರ ಬೆಳಿಗ್ಗೆ 8.30ಕ್ಕೆ ಹೇಮಾವತಿ ಪ್ರತಿಮೆಯಿಂದ ಕಾಲೇಜಿನ ಸಭಾಂಗಣದ ವರೆಗೆ ಮೆರವಣಿಗೆ ನಡೆಯಲಿದೆ. ಬೆಳಿಗ್ಗೆ 9.30ಕ್ಕೆ ನಾಡಧ್ವಜ ಹಾಗು ಪರಿಷತ್ತಿನ ಧ್ವಜಾರೋಹಣ ನೆರವೇರಲಿದೆ. ಬೆಳಿಗ್ಗೆ 10 ಗಂಟೆಗೆ ಉದ್ಘಾಟನಾ ಸಮಾರಂಭ ನಡೆಯಲಿದೆ. ಗೌರವಾಧ್ಯಕ್ಷ ರಾಜೇಂದ್ರ ದೊಡ್ಡಮಗ್ಗೆ ಆಶಯ ನುಡಿ ಆಡಲಿದ್ದಾರೆ. ಬಾ.ನಂ.ಲೋಕೇಶ್ ಅವರು ಬರೆದಿರುವ ಸಾಲರ್ ದೇಶದಲ್ಲಿ ಧರ್ಮಯುದ್ಧ, ಅನುಪಮ ಚಂದ್ರು ಅವರ ವೇದ ಸಿರಿ ಕವನ ಸಂಕಲನ, ಗೊರೂರು ಅನಂತರಾಜು ಅವರ ಸನ್ಮಾನ ಪ್ರಶಸ್ತಿ ಪರಂತು, ಶಿರಾ ವೆಂಕಟೇಶ್ ಸಂಪಾದಕತ್ವದ ಭಾವೋನ ಕೃತಿಗಳ ಬಿಡುಗಡೆ ಆಗಲಿದೆ ಎಂದರು.

ಮಧ್ಯಾಹ್ನ 12.30ಕ್ಕೆ ಚುಟುಕು ಸಾಹಿತ್ಯ-ಬದುಕಿಗೆ ಲಾಲಿತ್ಯ ವಿಷಯದ ಗೋಷ್ಠಿ ನಡೆಯ ಲಿದೆ. ಚುಟುಕು ಸಾಹಿತ್ಯದ ಅರ್ಥ, ಪ್ರಸ್ತುತತೆ, ಸಾಮಾಜಿಕ ಪರಿಣಾಮ ಹಾಗೂ ಸೃಜನಾತ್ಮಕ ಆಯಾಮಗಳ ಕುರಿತು ರಾಜ್ಯದ ಖ್ಯಾತ ಸಾಹಿತಿಗಳು ವಿಚಾರ ಮಂಡಿಸಲಿದ್ದಾರೆ.

ಡಾ. ಹೆಚ್. ಆರ್. ಆದರ್ಶ್, ರಾಜೇಶ್ವರಿ ಹುಲ್ಲೇನಹಳ್ಳಿ, ಎಂ.ಎನ್. ಸುಂದರ್‌ರಾಜ್ ಹಾಗು ಸೌಮ್ಯ ಬಾನಾಡಿ ಅವರು ವಿವಿಧ ಆಯಾಮಗಳಲ್ಲಿ ವಿಚಾರ ಮಂಡನೆ ಮಾಡಲಿದ್ದಾರೆ. ಮಧ್ಯಾಹ್ನ 1.30ಕ್ಕೆ ತಂಗಿಯ ತಲ್ಲಣ-ಅಕ್ಕನ ಅಕ್ಕರೆ ಗೋಷ್ಠಿ ನಡೆಯಲಿದೆ. ಮಹಿಳಾ ಸಾಹಿತ್ಯ, ಮಹಿಳಾ ಹಕ್ಕುಗಳು, ಸಮಾನತೆ, ಸಾಮಾಜಿಕ ನ್ಯಾಯ ಹಾಗು ಸ್ತ್ರೀ ಸಂವೇದನೆಗಳ ಕುರಿತು ಲೇಖಕಿಯರು ಮತ್ತು ಚಿಂತಕರು ವಿಚಾರ ಮಂಡನೆ ಮಾಡಲಿದ್ದಾರೆ. ಸುಶೀಲಾ ಸೋಮಶೇಖರ್ ಅಧ್ಯಕ್ಷತೆ ವಹಿಸಲಿದ್ದು, ಕಲಾವತಿ ಮಧುಸೂದನ, ಸ.ವೆಂ.ಪೂರ್ಣಿಮಾ ಹಾಗೂ ಸತ್ಯಪ್ರಿಯ ಸುತೆ ಸೇರಿ ಹಲವರು ಭಾಗವಹಿಸಲಿದ್ದಾರೆ. ಮಧ್ಯಾಹ್ನ 2.30ಕ್ಕೆ ಸತ್ಯದ ಶೋಧ-ಸೌಂದರ್ಯದ ಸೃಷ್ಟಿ ಗೋಷ್ಠಿ ನಡೆಯಲಿದ್ದು, ಪತ್ರಿ ಕೋದ್ಯಮ ಮತ್ತು ಸಾಹಿತ್ಯದ ಸಂಬಂಧ, ಸಮಾಜ ನಿರ್ಮಾಣದಲ್ಲಿ ಪತ್ರಿಕೆಯ ಪಾತ್ರ, ವರದಿಗಾರರ ಸೃಜನಶೀಲತೆ ಹಾಗೂ ಸಾಹಿತ್ಯದ ಸಾಮಾಜಿಕ ಹೊಣೆಗಾರಿಕೆ ಕುರಿತು ಹಿರಿಯ ಪತ್ರಕರ್ತರು ವಿಚಾರ ಹಂಚಿಕೊಳ್ಳಲಿದ್ದಾರೆ. ಚಲಂ ಹಾಡ್ಲಹಳ್ಳಿ ಅಧ್ಯಕ್ಷತೆ ವಹಿಸಲಿದ್ದು, ಜಿ.ಪ್ರಕಾಶ್, ಅತೀಖುರ್ ರೆಹಮಾನ್ ಮೊದಲಾದವರು ವಿಚಾರ ಮಂಡಿಸುವರು. ಮಧ್ಯಾಹ್ನ 3.30ಕ್ಕೆ ಬಹುಭಾಷಾ ಕವಿಗೋಷ್ಠಿ ನಡೆಯಲಿದೆ. ಸಂಜೆ 5.30 ಗಂಟೆಗೆ ಸಮ್ಮೇಳನ ಸಮಾರೋಪ ಸಮಾರಂಭ ಜರುಗಲಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಲೋಕೇಶ್, ಸೋಮನಾಯಕ್, ಆದರ್ಶ್, ತ್ರಿವೇಣಿ, ಪೂರ್ಣಿಮಾ, ಕಲಾವತಿ ಮಧುಸೂದನ್, ಹರೀಶ್, ಲತಾ ಇದ್ದರು.

## ಡೀಮ್ಡ್ ಅರಣ್ಯ ಒತ್ತುವರಿ ತೆರವಿಗೆ ಸರ್ವೆ ಕಾರ್ಯ ಚುರುಕು

» ಮೊದಲನೇ ಪುಟದಿಂದ

ಭೂ ಪ್ರದೇಶದ ಮೇಲೆ ರೈತರು ಹಕ್ಕು ಕಳೆದುಕೊಳ್ಳುವ ಆತಂಕ ಎದುರಾಗಿದೆ.


ಮರು ಪರಿಶೀಲನೆಯಲ್ಲಿ ಕಂದಾಯ ಇಲಾಖೆಯ ರಾಜಸ್ವ ನಿರೀಕ್ಷಕ, ಗ್ರಾಮ ಆಡಳಿತಾಧಿಕಾರಿ, ಭೂ ಮಾಪಕ, ಅರಣ್ಯ ಇಲಾಖೆ ಸಿಬ್ಬಂದಿ ಜಂಟಿ ಸರ್ವೆ ನಡೆಸಿ ನಕ್ಷೆ ಮೂಲಕ ಉಪ ಅರಣ್ಯ ಸಂರಕ್ಷಣಾಧಿ ಕಾರಿಗೆ ವರದಿ ಸಲ್ಲಿಸಲಿದ್ದಾರೆ. ಈ ವರದಿಯನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ ಪರಿಶೀಲಿಸಿ, ಜಿಲ್ಲಾ ಪ್ರಗತಿ ಪರಿಶೀಲನಾ ಸಭೆಯಲ್ಲಿ ವರದಿ ಮಂಡಿಸಿ ಎಲ್ಲಾ ಶಾಸಕರಿಗೂ ಮಾಹಿತಿ ನೀಡಬೇಕಿದೆ. ಬಳಿಕ ತೆರವು ಕಾರ್ಯಾಚರಣೆ ನಡೆಯಲಿದೆ.

ಡೀಮ್ಡ್ ಅರಣ್ಯ ಸಂರಕ್ಷಿಸಿ, ಅಭಿವೃದ್ಧಿಪಡಿಸಲು ಅರಣ್ಯ ಇಲಾಖೆಗೆ ಸರ್ಕಾರ ಪೂರ್ಣ ಹಕ್ಕು ನೀಡಿದ್ದು, ಜವಾಬ್ದಾರಿಯನ್ನು ವಲಯಾರಣ್ಯಾಧಿಕಾರಿಗೆ ವಹಿಸಿದೆ. ಆದ್ದರಿಂದ ಈ ಮರು ಪರಿಶೀಲನಾ ಕಾರ್ಯ ಜಿಲ್ಲೆಯ ರೈತರಿಗೆ ಯಾವ ಮಟ್ಟದಲ್ಲಿ ಅನಾನುಕೂಲ ಮಾಡಲಿದೆ ಎಂಬುದು ಸರ್ವೆ ಕಾರ್ಯ ಪೂರ್ಣಗೊಳ್ಳುವ ವರೆಗೂ ಕಾಯಬೇಕಿದೆ.

### ಪನಾಮ ವಿರುದ್ಧ ಕ್ರೊವೇಷಿಯಾ 1-0 ಮೇಲುಗೈ

# ಇಂಗ್ಲೆಂಡ್ ವಿರುದ್ಧ ಡ್ರಾ ಸಾಧಿಸಿದ ಘಾನಾ

• ಪ್ರಜೋದಯ ವರದಿ




**ಟೊರಂಟೊ:** ಫಿಫಾ ವಿಶ್ವಕಪ್ ಟೂರ್ನಿಯಲ್ಲಿ ಮಂಗಳವಾರ ರಾತ್ರಿ ನಡೆದ ಪಂದ್ಯಗಳಲ್ಲಿ ಇಂಗ್ಲೆಂಡ್ ವಿರುದ್ಧ ಘಾನಾ ಗೋಲು ರಹಿತ ಸಮಬಲ ಸಾಧಿಸಿದೆ. ಮತ್ತೊಂದೆಡೆ ಪನಾಮ ವಿರುದ್ಧ ಕ್ರೊವೇಷಿಯಾ 1-0 ಗೋಲುಗಳ ಅಂತರದ ಗೆಲುವು ದಾಖಲಿಸಿದೆ.

**ಇಂಗ್ಲೆಂಡ್ ಗೆಲುವಿಗೆ ಅಡ್ಡಿಯಾದ ಘಾನಾ:** ಬೋಸ್ಟನ್ ಸ್ಟೇಡಿಯಂನಲ್ಲಿ ಎಲ್ ಗುಂಪಿನಲ್ಲಿ ನಡೆದ ಪಂದ್ಯದಲ್ಲಿ ಇಂಗ್ಲೆಂಡ್ ಗೆಲುವಿಗೆ ಘಾನಾ ಅಡ್ಡಿಯಾಯಿತು. ಮೊದಲ ಪಂದ್ಯದಲ್ಲಿ ಕ್ರೊವೇಷಿಯಾ ವಿರುದ್ಧ 4-2 ಗೋಲುಗಳ ಭರ್ಜರಿ ಗೆಲುವು ದಾಖಲಿಸಿದ್ದ ಇಂಗ್ಲೆಂಡ್ ಗೆಲುವಿನ ನೆಚ್ಚಿನ ತಂಡವೆನಿಸಿತ್ತು. ಆದರೆ ಉತ್ತಮ ಪ್ರದರ್ಶನ ತೋರಿದ ಘಾನಾ, ಆಂಗ್ಲರ ಪಡೆಗೆ ಒಂದೇ ಒಂದು ಗೋಲು ಬಿಟ್ಟು ಕೊಡದೇ ಸಮಬಲ ಸಾಧಿಸುವಲ್ಲಿ ಯಶಸ್ವಿಯಾಯಿತು.


ಹಾಗಿದ್ದರೂ ಎರಡು ಪಂದ್ಯಗಳಲ್ಲಿ ಒಂದು ಗೆಲುವು ಹಾಗೂ ಡ್ರಾ ಸಾಧಿಸಿರುವ ಇಂಗ್ಲೆಂಡ್ 4 ಅಂಕಗಳೊಂದಿಗೆ ಗುಂಪಿನಲ್ಲಿ ಅಗ್ರಸ್ಥಾನ ಕಾಪಾಡಿಕೊಂಡಿದೆ. ಮತ್ತೊಂದೆಡೆ ಅಷ್ಟೇ ಅಂಕ ಗಳಿಸಿರುವ ಘಾನಾ ಎರಡನೇ ಸ್ಥಾನದಲ್ಲಿದೆ.

**ಕ್ರೊವೇಷಿಯಾ ಪುನರಾಗಮನ**

ಟೊರಂಟೊದಲ್ಲಿ ನಡೆದ ಎಲ್ ಗುಂಪಿನ ಮಗ ದೊಂದು ಪಂದ್ಯದಲ್ಲಿ ಪನಾಮ ವಿರುದ್ಧ ಕ್ರೊವೇಷಿಯಾ 1-0 ಗೋಲುಗಳ ಅಂತರದ ಜಯ ಗಳಿಸಿತು. ಕ್ರೊವೇಷಿಯಾ ಪರ ಆ್ಯಂಟೆ ಬುದಿಮಿರ್ ನಿರ್ಣಾಯಕ ಗೋಲು ಗಳಿಸಿದರು.

ಎಲ್ ಗುಂಪಿನಲ್ಲಿ ಮೂರನೇ ಸ್ಥಾನದಲ್ಲಿದ್ದು, ಕೊನೆಯ ಪಂದ್ಯ ನಿರ್ಣಾಯಕವೆನಿಸಿದೆ. ಅತ್ತ ಸತತ ಎರಡು ಸೋಲು ಕಂಡಿರುವ ಪನಾಮ ನಾಕೌಟ್ ಕನಸು ಭಗ್ನಗೊಂಡಿದೆ.

## ಫುಡ್ ಕೋರ್ಟ್ ಜಾಗ ಬದಲಿಸಲು ಆಗ್ರಹ



» ಮೊದಲನೇ ಪುಟದಿಂದ

ಳಿತ ಹಾಗು ಸ್ಥಳೀಯ ಆಡಳಿತವು ಪಟ್ಟಣದ ಪಾದಚಾರಿ ಮಾರ್ಗಗಳ ಮೇಲಿದ್ದ ಅತಿಕ್ರಮಣ, ತಾತ್ಕಾಲಿಕ ಅಂಗಡಿಗಳು, ಸಾರ್ವಜನಿಕರಿಗೆ ತೊಂದರೆ ಉಂಟುಮಾಡುತ್ತಿದ್ದ ಅನಧಿಕೃತ ವ್ಯಾಪಾರವನ್ನು ತೆರವುಗೊಳಿಸಿ ಪಟ್ಟಣವನ್ನು ಸುಗಮಗೊಳಿಸಲು ಕ್ರಮ ಕೈಗೊಂಡಿರುವುದು ಶ್ಲಾಘನೀಯ. ಆದರೆ, ಅದೇ ಪ್ರದೇಶದಲ್ಲಿ ಮತ್ತೊಂದು ಜನಸಂದಣಿ ಕೇಂದ್ರವಾಗುವ ಫುಡ್‌ಕೋರ್ಟ್ ನಿರ್ಮಾಣಕ್ಕೆ ಅವಕಾಶ ನೀಡುವುದು ಆಡಳಿತದ ಉದ್ದೇಶಕ್ಕೇ ವಿರುದ್ಧವಾಗುತ್ತದೆ ಎಂದು ಹೇಳಿದ್ದಾರೆ.

ಶುಕ್ರವಾರದಿಂದ ಭಾನುವಾರದ ವರೆಗೆ ಸಕಲೇಶಪುರಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಆಗಮಿಸುವ ಹಿನ್ನಲೆಯಲ್ಲಿ ಈ ಪ್ರದೇಶದಲ್ಲಿ ವಾಹನ ಹಾಗೂ ಜನರ ದಟ್ಟಣೆ ಮತ್ತಷ್ಟು ಹೆಚ್ಚಾಗುತ್ತದೆ. ಹೀಗಾಗಿ ಸಾರ್ವಜನಿಕ ಹಿತದೃಷ್ಟಿಯಿಂದ ಜಿಲ್ಲಾಧಿಕಾರಿ ತಮ್ಮ ವಿಶೇಷ ಅಧಿಕಾರ ಬಳಸಿ ಈ ಯೋಜನೆಯನ್ನು ಕೂಡಲೇ ಸ್ಥಗಿತಗೊಳಿಸಿ, ಸೂಕ್ತ ಪರ್ಯಾಯ ಸ್ಥಳದಲ್ಲಿ ಫುಡ್‌ಕೋರ್ಟ್ ನಿರ್ಮಾಣದ ಬಗ್ಗೆ ಪರಿಶೀಲನೆ ನಡೆಸಬೇಕೆಂದು ಅವರು ಒತ್ತಾಯಿಸಿದ್ದಾರೆ.

# ಬೀದಿ ಬದಿ ವ್ಯಾಪಾರಿಗಳು ಶುಚಿತ್ವ-ಸುರಕ್ಷತೆಗೆ ಆದ್ಯತೆ ನೀಡಿ

## ಪುರಸಭೆ ಮುಖ್ಯಾಧಿಕಾರಿ ಯು.ಎನ್.ಶಿವಶಂಕರ್ ಸಲಹೆ



• ಪ್ರಜೋದಯ ವರದಿ

**ಹೊಳೆನರಸೀಪುರ:** ಬೀದಿ ಬದಿ ವ್ಯಾಪಾರಿಗಳು ಆಹಾರ ಪದಾರ್ಥಗಳ ಗುಣಮಟ್ಟ, ಶುಚಿತ್ವ ಹಾಗು ಸುರಕ್ಷತೆಗೆ ಮೊದಲ ಆದ್ಯತೆ ನೀಡುವ ಮೂಲಕ ಗ್ರಾಹಕರು ಮತ್ತು ಸಾರ್ವಜನಿಕರ ಆರೋಗ್ಯದ ಹಿತವನ್ನು ಕಾಪಾಡಬೇಕೆಂದು ಪುರಸಭೆ ಮುಖ್ಯಾಧಿಕಾರಿ ಯು.ಎನ್.ಶಿವಶಂಕರ್ ಅವರು ತಿಳಿಸಿದರು.

ಪಟ್ಟಣದ ಯೋಗ ಭವನದಲ್ಲಿ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ, ಆಹಾರ ಸುರಕ್ಷತಾ ಇಲಾಖೆ, ತಾಲ್ಲೂಕು ಆರೋಗ್ಯ ಇಲಾಖೆ, ನಮ್ಮ ಕ್ಲಿನಿಕ್ ಮತ್ತು ಜಿಲ್ಲಾ ಕೌಶಲ್ಯಾಭಿ ವೃದ್ಧಿ ನಿಗಮದ ಸಂಯುಕ್ತಾಶ್ರಯದಲ್ಲಿ ಬೀದಿ ಬದಿ ವ್ಯಾಪಾರಿಗಳಿಗಾಗಿ ಹಮ್ಮಿಕೊಂಡಿದ್ದ ಆರೋಗ್ಯ ಶಿಬಿರ ಹಾಗು ಆಹಾರ ಸುರಕ್ಷತೆ ಕುರಿತು ಅರಿವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವ್ಯಾಪಾರಕ್ಕೆ ಆದ್ಯತೆ ನೀಡುವ ಜೊತೆಗೆ ಬೀದಿ ಬದಿ ವ್ಯಾಪಾರಿಗಳು ತಮ್ಮ ಆರೋಗ್ಯದ ಬಗ್ಗೆಯೂ ಕಾಳಜಿ ವಹಿಸಬೇಕು. ಆರೋಗ್ಯ ಶಿಬಿರಗಳ ಸದುಪಯೋಗ ಪಡೆದುಕೊಳ್ಳುವುದರೊಂದಿಗೆ ಪ್ರಧಾನಮಂತ್ರಿ ಆತ್ಮನಿರ್ಭರ್ ನಿಧಿ ಯೋಜನೆಯ ಸೌಲಭ್ಯ ವನ್ನೂ ಬಳಸಿಕೊಳ್ಳಬೇಕೆಂದು ಸಲಹೆ ನೀಡಿದರು.

ಪಟ್ಟಣ ಹಾಗು ನಗರ ಪ್ರದೇಶಗಳ ಹೋಟೆಲ್‌ಗಳಲ್ಲಿ ಆಹಾರ ಪದಾರ್ಥಗಳು ದುಬಾರಿ ದರದಲ್ಲಿ ದೊರೆಯುತ್ತವೆ. ಅದಕ್ಕೆ ಪರ್ಯಾಯವಾಗಿ ರಸ್ತೆ ಬದಿಯ ಫಾಸ್ಟ್‌ಫುಡ್‌ಗಳು ರುಚಿಕರವಾಗಿ ಹಾಗು ಕೈಗೆಟುಕುವ ದರದಲ್ಲಿ ಲಭ್ಯವಾಗುವುದರಿಂದ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಅವಲಂಬಿಸುತ್ತಿದ್ದಾರೆ. ಹೀಗಾಗಿ ಗ್ರಾಹಕರಿಗೆ ಸುರಕ್ಷಿತ, ಶುಚಿ ಹಾಗುಗುಣಮಟ್ಟದ ಆಹಾರ ನೀಡುವುದು ಬೀದಿ ಬದಿ ವ್ಯಾಪಾರಿಗಳ ಪ್ರಮುಖ ಹೊಣೆಗಾರಿಕೆಯಾಗಬೇಕೆಂದು ಹೇಳಿದರು.

ತಾಲ್ಲೂಕು ಆಹಾರ ಸುರಕ್ಷತಾ ಅಧಿಕಾರಿ ವಿನಯ್ ಅವರು ಆಹಾರ ಸುರಕ್ಷತಾ ಕಾಯ್ದೆ, ನಿಯಮಗಳು ಹಾಗು ಪಾಲಿಸಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಕುರಿತು ಮಾಹಿತಿ ನೀಡಿದರು. ಜಿಲ್ಲಾ ಕೌಶಲ್ಯಾಭಿವೃದ್ಧಿ ಮಿಷನ್‌ನ ಎ.ಜೆ.ಕೋಮಲ, ತಾಲ್ಲೂಕು ಆರೋಗ್ಯ ಇಲಾಖೆಯ ಡಾ.ಪ್ರೀತಿ, ಡಾ.ಪ್ರಜ್ವಲ್, ತಾಲ್ಲೂಕು ಆರೋಗ್ಯ ಶಿಕ್ಷಣ ವಿಭಾಗದ ಡಾ. ಮಮ್ತಾಜ್ ಬೇಗಂ, ಪುರಸಭೆ ಸಮುದಾಯ ಸಂಘಟನಾಧಿಕಾರಿ ಎನ್.ಆರ್.ಪಂಕಜಾ, ಸಮುದಾಯ ಸಂಘಟಕ ಎನ್.ಎಂ.ರಮೇಶ್ ಇತರರು ಉಪಸ್ಥಿತರಿದ್ದರು.

### ಜೀವಭಯದಲ್ಲೇ ಸಂಚಾರ: ದುರಸ್ತಿಗೆ ಸಾರ್ವಜನಿಕರ ಒತ್ತಾಯ


# ಸಕಲೇಶಪುರ-ಬೆಳಗೋಡು ರಸ್ತೆ ಹೊಂಡಮಯ

• ಪ್ರಜೋದಯ ವರದಿ

**ಸಕಲೇಶಪುರ:** ಸಕಲೇಶಪುರ-ಬೆಳಗೋಡು-ಈಶ್ವರಹಳ್ಳಿ ಮಾರ್ಗವಾಗಿ ಹಾಸನಕ್ಕೆ ಸಂಪರ್ಕ ಕಲ್ಪಿಸುವ ಪ್ರಮುಖ ರಸ್ತೆ ಸಂಪೂರ್ಣ ಹದಗೆಟ್ಟಿದ್ದು, ವಾಹನ ಸವಾರರು ಮತ್ತು ಸಾರ್ವಜನಿಕರು ಜೀವಭಯದಲ್ಲೇ ಸಂಚರಿಸುವಂತಾಗಿದೆ.

ತಾಲ್ಲೂಕಿನ ಸುತ್ತಮುತ್ತಲಿನ ಹಲವು ಗ್ರಾಮಗಳ ಜನರು ಇದೇ ರಸ್ತೆಯನ್ನು ಅವಲಂಬಿಸಿದ್ದು, ದಿನನಿತ್ಯ ಸಾವಿರಾರು ವಾಹನಗಳು ಸಂಚರಿಸುತ್ತವೆ. ರಸ್ತೆ ತುಂಬಾ ಹೊಂಡಗಳಿಂದ ಕೂಡಿರುವ ಕಾರಣ ಸಂಚಾರ ದುಸ್ತರವಾಗಿದೆ. ಜಿಲ್ಲೆಯ ಪ್ರಮುಖ ಸಂಪರ್ಕ ರಸ್ತೆಯೊಂದಾಗಿರುವ ಈ ಮಾರ್ಗದ ದುಸ್ಥಿತಿಗೆ ಸಾರ್ವಜನಿಕರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ರಂಗೇನಹಳ್ಳಿ ಮತ್ತು ಲಕ್ಷ್ಮೀಪುರ ಭಾಗಗಳಲ್ಲಿ ರಸ್ತೆಯ ಮಧ್ಯಭಾಗದಲ್ಲೇ ಬೃಹತ್ ಹೊಂಡ ಗಳು ನಿರ್ಮಾಣವಾಗಿವೆ. ಇದರಿಂದ ದ್ವಿಚಕ್ರ ವಾಹನ ಸವಾರರು, ಶಾಲಾ-ಕಾಲೇಜು ವಿದ್ಯಾರ್ಥಿಗಳು ಹಾಗು ಸಾರ್ವಜನಿಕರು ಅಪಾಯದ ನಡುವೆ ಪ್ರಯಾಣಿಸಬೇಕಾದ ಪರಿಸ್ಥಿತಿ ಎದುರಿಸುತ್ತಿದ್ದಾರೆ. ಮಳೆಯ ಸಂದರ್ಭ ಹೊಂಡಗಳು ನೀರಿನಿಂದ ತುಂಬಿ ಕಾಣಿಸದ ಕಾರಣ ಅಪಘಾತಗಳ ಸಾಧ್ಯತೆ ಮತ್ತಷ್ಟು ಹೆಚ್ಚುತ್ತಿದೆ ಎಂದು ಸ್ಥಳೀಯರು ಆತಂಕ ವ್ಯಕ್ತಪಡಿಸಿದ್ದಾರೆ.



ಹೊಂಡಗಳನ್ನು ತಪ್ಪಿಸಲು ವಾಹನ ಸವಾರರು ಹರಸಾಹಸ ಪಡುತ್ತಿದ್ದು, ಕೆಲವೆಡೆ ವಾಹನಗಳು ನಿಯಂತ್ರಣ ತಪ್ಪಿ ಬಿದ್ದಿರು ಘಟನೆಗಳೂ ನಡೆದಿವೆ. ರಸ್ತೆಯ ದುರಸ್ತಿಗೆ ಹಲವು ಬಾರಿ ಸಾರ್ವಜನಿಕರು, ಜನಪ್ರತಿನಿಧಿಗಳು ಹಾಗು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳ ಗಮನ ಸೆಳೆದಿದ್ದರೂ ಪರಿಹಾರ ಮಾತ್ರ ಸಿಕ್ಕಿಲ್ಲ.

**ಕ್ರಮ ಕೈಗೊಳ್ಳದಿದ್ದರೆ ಪ್ರತಿಭಟನೆ ಎಚ್ಚರಿಕೆ**

ಜನರ ಸುರಕ್ಷತೆ ಹಾಗು ಸುಗಮ ಸಂಚಾರದ ಹಿತದೃಷ್ಟಿಯಿಂದ ರಸ್ತೆ ದುರಸ್ತಿಗೆ ಆದ್ಯತೆ ನೀಡಬೇಕೆಂಬ ಕೂಗು ಜೋರಾಗಿದೆ. ಮಳೆಗಾಲದ ಮಧ್ಯೆಯೇ ರಸ್ತೆ ಹದಗೆಟ್ಟಿರುವುದು ಗ್ರಾಮೀಣ ಪ್ರದೇಶದ ಜನರ ನಿತ್ಯ ಸಂಚಾರಕ್ಕೆ ದೊಡ್ಡ ಸವಾಲಾಗಿ ಪರಿಣಮಿಸಿದೆ. ಹೀಗಾಗಿ ರಸ್ತೆ ಹೊಂಡ ಮುಚ್ಚಿ, ಪ್ರಾಣ ಉಳಿಸಿ ಎಂಬ ಘೋಷಣೆಯೊಂದಿಗೆ ಸಾರ್ವಜನಿಕರು ಪ್ರತಿಭಟನೆಯ ಎಚ್ಚರಿಕೆ ಯನ್ನೂ ನೀಡಿದ್ದು, ಸಂಬಂಧಪಟ್ಟ ಇಲಾಖೆ ಮತ್ತು ಸರ್ಕಾರ ತುರ್ತು ಕ್ರಮ ಕೈಗೊಂಡು ರಸ್ತೆ ದುರಸ್ತಿ ಕಾರ್ಯ ಆರಂಭಿಸಬೇಕೆಂದು ಒತ್ತಾಯಿಸಿದ್ದಾರೆ.

ಸಕಲೇಶಪುರ-ಬೆಳಗೋಡು ರಸ್ತೆ ಜಿಲ್ಲೆಯ ಪ್ರಮುಖ ಸಂಪರ್ಕ ಕೊಂಡಿಯಾಗಿದೆ. ಜನರ ಸುರಕ್ಷತೆಯ ದೃಷ್ಟಿಯಿಂದ ತಕ್ಷಣ ದುರಸ್ತಿ ಕಾರ್ಯ ಕೈಗೊಳ್ಳಬೇಕು. ರಸ್ತೆ ಹೊಂಡಗಳು ಅಪಘಾತಗಳಿಗೆ ಆಹ್ವಾನ ನೀಡುತ್ತಿದ್ದು, ಯಾವುದೇ ಅನಾಹುತ ಸಂಭವಿ ಸುವ ಮುನ್ನವೇ ಅಧಿಕಾರಿ ಗಳು ಎಚ್ಚೆತ್ತುಕೊಳ್ಳಬೇಕೆಂದು ಮಲೆನಾಡು ರಕ್ಷಣಾ ಸೇನೆಯ ಜಿಲ್ಲಾ ಉಪಾಧ್ಯಕ್ಷ ನಾಗೇಂದ್ರ, ಹೊಸಕೊಪ್ಪಲು ಅವರು ಆಗ್ರಹಿಸಿದ್ದಾರೆ.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK